
ಕೊರವಂಜಿ



ಸೆಪ್ಟೆಂಬರ್ ೧೯೪೩

ಮಾಸ ಪತ್ರಿಕೆ

ಸಂಪಾದಕರು :
ಶ್ರೀ॥ ರಾ. ಶಿ.

ಚಿತ್ರಕಾರರು :
ಶ್ರೀ॥ ಆರ್. ಕೆ. ಲಕ್ಷ್ಮಣ್

ಬರಹಗಾರರು :

ಶ್ರೀ॥ ನಾ. ಕ.
ಶ್ರೀ॥ ಬೀರಣ್ಣ
ಶ್ರೀ॥ ಎಸ್. ವೀ. ವೀ. ಕೃತಂ
ಶ್ರೀಮತಿ ಮೀನಾಬಾಯಿ
ಶ್ರೀ॥ ರಂಗನಾಥ
ಶ್ರೀ॥ ಪಾಟಾಳಿ
ಶ್ರೀ॥ ಇಂದಾಗೆ ಈಶ್ವರಯ್ಯ

ಬಿಡಿ ಪತ್ರಿಕೆ -- ಕೇವಲ ಎರಡಾಣೆ

ಶ್ರೀ ನಗೆಯ ಮಾಸ ಪತ್ರಿಕೆ.



ಸಂಪುಟ ೨]　　ಕೊರವಂಜಿ—ಸೆಪ್ಟೆಂಬರ್ ೧೯೪೩　　[ಸಂಚಿಕೆ ೬

ಸಂಪಾದಕೀಯ

ಯುದ್ಧದ ಗಾಳಿ ಕೊರವಂಜಿಗೂ ಜೋರಾಗಿ ಬೀಸಿತು. ಇನ್ನು ಸುಮ್ಮನಿರಲು ಸಾಧ್ಯವಿಲ್ಲವೆಂದು ಕೊರವಂಜಿಯೂ ಸಮರದುಡುಪನ್ನು ಧರಿಸಿ, ಖಾಕೀ ಕಾಗದದಲ್ಲಿ, ಹೊರಟಿರುವಳು. ಕೊರವಂಜಿಯು ಯುದ್ಧೋನ್ಮುಖಿಯಾದ ಮೇಲೆ ಕೇಳಬೇಕೆ, ಶತೃ ನಿರ್ನಾಮವಾದಂತೆಯೇ.

ಮೊದಲನೆಯದಾಗಿ ಈ ಸುದ್ದಿಯನ್ನು ಕೇಳಿಯೇ, ಇನ್ನು ಜಯದ ಯೋಚನೆಯೇ ಇಲ್ಲವೆಂದು ಮುಸ್ಸಲಿನಿಯು ರಾಜೀನಾಮೆಯಿತ್ತು, ದೇಶ ಕೇರಿ ಬಿಟ್ಟು ಓಡಿ ಹೋಗಲು ಶುರು ಮಾಡಿದ.

ಇಟಲಿಯವರೆಲ್ಲರೂ ಓಹೋ ಎಂದು ಕೈ ಎತ್ತಿ ಕೂಗಿ ಶಾಂತಿ ಸಂಧಾನಕ್ಕೆಸಗಿದ್ದಾರೆ.

ಹಿಟ್ಲರನು ಕೂಡ ರಷ್ಯಾ ರಣರಂಗವನ್ನು ಅದರ ಪಾಡಿಗೆ ಅದನ್ನು ಬಿಟ್ಟು ತಾನು ಬರ್ಲಿನ್ನಿಗೆ ಹಾರಿ ಹೋಗಿದ್ದಾನೆ.

ಜಪಾನಿ ಮುಖ್ಯ ಮಂತ್ರಿಯು ಥರಥರಗುಟ್ಟುತ್ತ ಇತರ ಮಂತ್ರಿಗಳೊಂದಿಗೆ, ಈ ಹೊಸ ಶತ್ರುವನ್ನು ಜಯಿಸಲಸಾಧ್ಯ. ಏನು ಮಾಡೋಣ ಎಂದು ಯೋಚಿಸ ಹತ್ತಿದ್ದಾನೆ.

ಅಂದ ಮೇಲೆ ಇನ್ನೂ ಕೆಲವು ತಿಂಗಳಲ್ಲೇ ಕೊರವಂಜಿಯು ಶತ್ರು ನಿರ್ನಾಮವನ್ನು ಪೂರೈಸುತ್ತಾಳೆ. ಅನಂತರ ಎಂದಿನಂತೆ ಶುಭ್ರ ಉಡುಪನ್ನು ಧರಿಸಿ ಶಾಂತಿ ನಗೆಯನ್ನು ಬೀರುತ್ತ, ಎಲ್ಲರನ್ನೂ ಕಚಗುಳಿಯಿಟ್ಟು ನಗಿಸುತ್ತಾ ತನ್ನ ಸೇವೆಯನ್ನು

ನಡೆಸುವಳು. ಅಲ್ಲಿನ ತನಕ ಕೊರವಂಜಿಯ ಖಾಕಿ ಕಾಗದವನ್ನು ನೋಡಿ ಓದುಗರು ಗಾಬರಿ ಪಡಬೇಕಾಗಿಲ್ಲ. ಯುದ್ಧೋನ್ಮುಖಿಯಾದ ಕೊರವಂಜಿಯ ತಪ್ಪು ನೆಪ್ಪುಗಳನ್ನು ಹೆಚ್ಚಾಗಿ ಮನಸ್ಸಿಗೆ ತಂದುಕೊಳ್ಳಬೇಕಾಗಿಲ್ಲ.

ಓದುಗರು ಈ ರೀತಿ ನೆರವಾದರೆ ಖಂಡಿತವಾಗಿಯೂ ಜಯಭೇರಿಯನ್ನು ಹೊಡೆದು ಶಾಂತಿಯನ್ನೇರ್ಪಡಿಸುತ್ತಾಳೆ.

—ಸಂಪಾದಕ.

ಕುಹಕಿಡಿಗಳು

ಅಖಿಲ ಭಾರತ ಚರಕಾ ಸಂಘಕ್ಕೆ "ಯು. ಕೆ. ಸಿ. ಸಿ."ಯವರೂ ಸದಸ್ಯರಾಗಿದ್ದಾರೆಂಬುದು ಸುಳ್ಳಂತೆ.

✤ ✤ ✤

ಹೋಟಲಿನಲ್ಲಿ ಈಗ ಕಸ ಕಡ್ಡಿ ಬಿದ್ದಿರುವುದಿಲ್ಲವಂತೆ.

—ಅಲ್ಲದೇ ಏನು!—ಅದನ್ನೇ ತಿಂಡಿ ಎಂದು ಮಾರುತ್ತಾರಲ್ಲ!

✤ ✤ ✤

ಪಾಕೀಸ್ಥಾನದಲ್ಲಿ ನ್ಯಾಯಾಸ್ಥಾನಗಳುಂಟೆ ಎಂದು ಒಬ್ಬರ ಪ್ರಶ್ನೆ—

—ನ್ಯಾಯಾಸ್ಥಾನದಲ್ಲಿ ಪಾಕಿಸ್ತಾನ ಉಂಟೆ ಎಂದು ಸವಾಲು.

✤ ✤ ✤

ನ್ಯಾಯಸ್ಥಾನದಲ್ಲಿ ಅಪರಾಧಿಯು ಮನೋನ್ಮತ್ತನಾಗಿ 'ನ್ಯಾಯ ಬೇಕು, ನ್ಯಾಯ ಬೇಕು' ಎಂದು ಕೂಗಿದಾಗ, ನ್ಯಾಯಾಧೀಶರು ಆತನನ್ನು ಎಚ್ಚರಿಸಿ, 'ಹಾಗೆಲ್ಲಾ ಕೂಗಬೇಡ, ಬೇಡ ಬೇಡ ಇದು ಕೇವಲ ನ್ಯಾಯಾಸ್ಥಾನ ಅಷ್ಟೆ' ಎಂದರಂತೆ.

✤ ✤ ✤

ಮೊನ್ನಿನ ವೈದ್ಯ ಸಮ್ಮೇಳನದಲ್ಲಿ ಹೊಸದಾದ ಒಂದು ಖಾಯಿಲೆಯನ್ನು ಬಹಿರಂಗಪಡಿಸಿ, ನಾಮಕರಣ ಮಾಡಿದರಂತೆ—ಇನ್‌ಫ್ಲೂಯೇನ್ಸೋಸಿಸ್ ಎಂದು.

—ಆಕಾಶವಾಣಿಯ ಭಾಷಣಕಾರರು ಇದನ್ನು ಸಂಪೂರ್ಣವಾಗಿ ಮರೆತೇ ಹೋದರಂತೆ.

ನಮ್ಮ ದೇಶದಲ್ಲಿ ಶೇಕಡ ತೊಂಬತ್ತು ಜನಕ್ಕೆ ಓದುಬರಹ ಬಾರದಂತೆ,

—ಅವರೋದುವ ಪತ್ರಿಕೆಯು ಯಾವುದೆಂಬುದು ನಮಗೂ ಗೊತ್ತು.

✤ ✤ ✤

ಒಂದು ಬ್ಲೇಡಿನಿಂದ ಒಂದು ವರುಷ ಕ್ಷೌರ ಮಾಡಿಕೊಂಡೆ ಎಂದು ವಿದ್ಯಾರ್ಥಿಯ ಹೇಳಿಕೆ.

—ಆ ತೆರನಾದ ಬ್ಲೇಡುಗಳು ನಾವು ನೋಡಿದ್ದೇವಾದರೂ ಒಂದೇ ಗಂಟೆಯಲ್ಲಿ ಕ್ಷೌರ ಮಾಡಲಾಗಿದೆ.

✤ ✤ ✤

"ಹೊಟ್ಟೆಗಿಲ್ಲದೆ ೨೬ ಮಂದಿಯ ಮರಣ." (ದೈನಂದಿನ ಪತ್ರಿಕೆ)

—ಪ್ರಜಾ ಸತ್ತೆಯ ಅಧಿಕಾರ!

✤ ✤ ✤

ಜತೆ ಜತೆಯ ಸುದ್ದಿಗಳು.

"ಮುಂದಿನ ಯುದ್ಧ ಕ್ರಮ ನಿರ್ಧರಿಸಿದೆ"

"ಯುದ್ಧವು ದೀರ್ಘವಾಗುವುದು"

—ಹಾಗೇಕೆ ನಿರ್ಧರಿಸಿದರು?

✤ ✤ ✤

ವಿಶ್ವ ವಿದ್ಯಾಲಯ ಎಂದು ಏಕೆ ಹೆಸರಿಟ್ಟರು ಎಂಬ ಪ್ರಶ್ನೆ,

—ವಿಶ್ವ ವಿದ್ಯ ಲಯವಾಗುತ್ತಿರುವುದರಿಂದಲ್ಲವೇ?

✤ ✤ ✤

"ಧರ್ಮರಾಯನ ಗುಡಿ ಬಳಿ ಹೊಡೆದಾಟ." (ಪತ್ರಿಕೆ)

—ಧರ್ಮರಾಯ ಏನು ಮಾಡುತ್ತಿದ್ದ?

✤ ✤ ✤

ಮೈಸರಾಯರವರು ಮೈಸೂರಿಗೆ ಆಗಮಿಸಿದರು.

—ಆದರೂ ಆನೆಗಳೇನೂ ಈಸಾರಿ ಹೆದರಲೇ ಇಲ್ಲ—

✤ ✤ ✤

ಶ್ರೀ ಆಣೆಗಳು ಸಿಲೋನಿಗೆ ಕಳಿಸಲ್ಪಟ್ಟರು—

—ಏಕೆ ಅಲ್ಲಿಯೂ ಚಿಲ್ಲರೆ ಅಭಾವವೇ—

———o———

ಸುರಸುರಬತ್ತಿ

"ನಾನು ಕಂಡ ಜಡೆ" ಎಂಬ ಪದ್ಯವನ್ನು ಓದಿ ಮುಗಿಸಿದ ಕೂಡಲೇ ಆಧುನಿಕ ತರುಣ ಕನ್ನಡ ಕವಿಗಳೊಬ್ಬರು, "ಇದನ್ನು ನನ್ನ 'ಕೆಂಪಾಂಬುಧಿ' ಎಂಬ ಗ್ರಂಥದಿಂದ ತೆಗೆದು ಓದಿದೆ" ಎಂದರು. ಆಗ ಸಭಿಕರಲ್ಲೊಬ್ಬರು, "ಒಳ್ಳೆ ಕೆಲಸ ಮಾಡಿದಿರಿ! ಗ್ರಂಥದಲ್ಲಿರಲು ಅದಕ್ಕೆ ಯೋಗ್ಯತೆ ಸಾಲದು" ಅಂದರಂತೆ.

* * *

ಪ್ರಶ್ನೆ—ಮುಹಮ್ಮದ್ ಬಿನ್ ತೊಗಲಕ್‌ನು ಡಿಲ್ಲಿ ಸಿಂಹಾಸನವನ್ನು ಹತ್ತಿದ ಕೂಡಲೇ ಮಾಡಿದ ಕೆಲಸವೇನು?

ಉತ್ತರ—ಸಿಂಹಾಸನದಲ್ಲಿ ಕುಳಿತ, ಸಾರ್.

* * *

ಆತ ಬರುತ್ತಲೂ ಎಲ್ಲರೂ ಅಚ್ಚರಿಯಿಂದ ಎದ್ದು ನಿಂತರು. ಯಾರಿವರು? ಯಾರಿವರು? ಎಂದು ಒಬ್ಬರನ್ನೊಬ್ಬರು ಕೇಳಿ ಕಂಗಾಲಾದರು. ಆತನ ನಡಿಗೆಯ ಲೀಲಾಜಾಲತ್ವ ಎಲ್ಲರನ್ನೂ ಬೆರಗುಗೊಳಿಸಿತು. ಆತನ ಠೀವಿ ಎಲ್ಲರ ಕಣ್ಣನ್ನೂ ಕುಕ್ಕಿತು. "ಯಾರ‍್ರೀ, ಇವರು?" ಎಂದು ನಾನು ನನ್ನ ಪಕ್ಕದವರನ್ನು ಕೇಳಿದೆ. "ಗೊತ್ತಿಲ್ಲವೆ? ಮೊನ್ನೆ ಸರ್ಕಸ್ಸಿನಲ್ಲಿ ಇದ್ದಕ್ಕಿದ್ದ ಹಾಗೆಯೇ ಸಿಂಹ ಬೋನೊಳಗಿಂದ ತಪ್ಪಿಸಿಕೊಂಡು ಹೊರಕ್ಕೆ ಹಾರಿದಾಗ, ಇವರೇ ಆ ಬೋನೊಳಕ್ಕೆ ಹೋಗಿ ಬಾಗಿಲು ಹಾಕಿಕೊಂಡಿದ್ದು" ಅಂದರು.

* * *

ಟಪಾಲ್ ಇಲಾಖೆಯುವರ ಮೇಲೆ ಪಕ್ಕದ ಮನೆಯುವರು ದೂರು ಹೇಳುತ್ತಿದ್ದರು. "ಶುದ್ಧ ಅಪ್ರಯೋಜಕರು. ವಿಳಾಸದಾರರನ್ನು ಪತ್ತೆ ಹಚ್ಚುವುದೇ ಇಲ್ಲ. "ಹೆಚ್. ಹೆಚ್. ಹುಚ್ಚಪ್ಪ, ಮೈಸೂರು" ಅಂತ ನಾನು ಒಂದು ಕವರು ಹಾಕಿದರೆ, ನನ್ನ ಕೈಗೇ ತಂದು ಕೊಟ್ಟಿದಾರಲ್ಲಾ............ಇದಕ್ಕೆ ನಗಬೇಕೆ? ಅಳಬೇಕೆ?" ಅಂದರು. ನಾನು ನಕ್ಕೆ.

* * *

"ನೋಡಪ್ಪ! ನನ್ನ ತಾಯಿ ಮನಸ್ಸಿಗೆ ಮದ್ರಾಸಿನಲ್ಲಿ ಇಂಥಾ ನಿರಾಶೆಯಾಗುತ್ತೆ ಅಂತ ನನಗೆ ಗೊತ್ತೇ ಇರಲಿಲ್ಲ."

"ಅದು ಯಾಕೆ? ನೀ ಹುಟ್ಟಿದ್ದು ಬೆಂಗಳೂರಲ್ಲಲ್ಲವೆ?"

"ಏನ್ರಿ, ಲಕ್ಷ್ಮಮ್ಮನವರೇ! ಗುಂಡಮ್ಮನವರ ಮನಸ್ಸು ಕಲ್ಲು ಮನಸ್ಸಲ್ಲವೆ?"

"ಹೌದು! ವಜ್ರ ಒಂದರಿಂದ ಅದನ್ನ ಕೊಂಚ ತಿದ್ದಬಹುದು, ಅಷ್ಟೆ."

*　　　*　　　*

ಸಿಗರೇಟು ಸೇವನೆ ಮಾಡುವುದರಿಂದ ಶರೀರದಲ್ಲಿ ನಿಧಾನವಾಗಿ ವಿಷ ತುಂಬಿದ ಹಾಗಾಗುವುದು ಎಂದು ತಂದೆ ಬೋಧನೆಮಾಡಿ ನಿರೋಧಿಸಲು ಯತ್ನಿಸಿದರೆ, ಮಗ, "ನಿಧಾನವಾಗಿಯೇ ತುಂಬಲಿ! ನನಗೇನೂ ಅವಸರವಿಲ್ಲ" ಅಂದನಂತೆ.

*　　　*　　　*

ಮ್ಯಾಜಿಸ್ಟ್ರೇಟರ ಕೋರ್ಟು—ಯಾರನ್ನೋ ಹೊಡೆದ ಆಪಾದನೆ. ಅಪರಾಧಿಯನ್ನು ಎದುರಿಗೆ ನಿಲ್ಲಿಸಿಕೊಂಡು ಪಬ್ಲಿಕ್ ಪ್ರಾಸಿಕ್ಯೂಟರ್ ಸಾಹೇಬರು ಪ್ರಶ್ನೆಗಳ ಪರಂಪರೆಯನ್ನು ಬೀರುತ್ತಿದಾರೆ. "ಅವನು ಬೈದಾಗ ನಿನಗೆ ಸಹಿಸಲಿಲ್ಲ, ಕೈಬೀಸಿ ಮೆಲ್ಲಗೆ ಒಂದು ಏಟು ಕೊಟ್ಟೆ, ಅಂದಿಯಲ್ಲ........ಮೆಲ್ಲಗೆ ಹೊಡೆದಿಯಾ? ಮೆಲ್ಲಗೆ? ಜೋರಾಗಿ ಹೊಡೆಯಲಿಲ್ಲವೆ? ಹೆಚ್ಚು ಕೋಪಬರಲಿಲ್ಲವೆ? ಮೆತ್ತಗೆ ಬೀಸಿದೆಯಾ ಕೈನ? ಎಷ್ಟು ಮೆತ್ತಗೆ? ಎಷ್ಟು ಮೆಲ್ಲಗೆ? ವಿಪರೀತ ಮೆಲ್ಲಗೆ? ಅವನಿಗೆ ನೋವಾಗಲೇ ಇಲ್ಲವೆ? ಎಲ್ಲಿ! ಇವರ ಬೆನ್ನಮೇಲೆ ಹಾಗೆಯೇ ಹೊಡೆದು, ಎಷ್ಟು ಮೆತ್ತಗೆ ಅಂತ ತೋರಿಸು ಬಾ" ಅಂದರು, ತನ್ನ ಜೂನಿಯರ್ ಕಡೆ ಕೈ ತೋರಿಸಿ. ಅಪರಾಧಿ ಇಳಿದು ಬಂದು, ಜೂನಿಯರನ್ನು ಹಿಡಿದು ಎತ್ತಿ ಮೇಜಿನ ಮೇಲೆ ಬಲವಾಗಿ ಕುಕ್ಕಿ ಅವರ ಕಪಾಳಕ್ಕೆ ಏಳೆಂಟು ಬಲವಾದ ಏಟುಗಳನ್ನು ಬಿಟ್ಟು ಮತ್ತೆ ಅವರನ್ನೆತ್ತಿ ಬಾಗಿಲಿಂದಾಚೆಗೆ ಒಗೆದ. ಕೋರ್ಟಿನಲ್ಲಿದ್ದವರೆಲ್ಲರಿಗೂ ದಿಗ್ಭ್ರಮೆ ಹಿಡಿಯಿತು. ಅಪರಾಧಿ ಸ್ವಸ್ಥಾನದಲ್ಲಿ ಹೋಗಿ ನಿಂತು, "ಅದರ ಸಾವಿರದಲ್ಲೊಂದು ಪಾಲು, ಬುದ್ದಿ! ನೀವೇ ಲೆಕ್ಕ ನೋಡಿಕೊಳ್ಳಿ" ಅಂದ.

*　　　*

ಒಂದು ತಮಿಳು ಚಿತ್ರದ ಪ್ರಕಟಣೆಯಲ್ಲಿ "ನೋಡಲಿಕ್ಕೂ, ಆನಂದ ಪಡಲಿಕ್ಕೂ ಮರೆಯಬೇಡಿ" ಎಂದು ಮಹಾ ಜನಗಳನ್ನು ಬೇಡಲಾಗಿದೆ.

*　　　*

ಕಾಲೇಜು ಹುಡುಗಿಯರಿಬ್ಬರು ಜಗಳವಾಡುತ್ತಿದ್ದರು. ಮಾತುಗಳು ಮಾರುದ್ದ ಬೆಳೆದವು. ಕಾವೇರಿ ಕೋಪ ಕುದಿಯಿತು. "ನಿನ್ನ ಮೂತಿಯೋ, ನೀನೋ! ದಿನ ದಿನಕ್ಕೂ ಅವಲಕ್ಷಣ ಹೆಚ್ಚು ಹೆಚ್ಚಾಗ್ತಾಯಿದೆ" ಅಂದಳು ಒಬ್ಬಳು. "ನಿನ್ನ ಮೂತಿಗೆ ಅದೂ ಸಾಧ್ಯವಿಲ್ಲ" ಅಂದಳಿನ್ನೊಬ್ಬಳು.

*　　　*

*

ಸೈನ್ಯದ ಇಲಾಖೆಗೆ ಸೇರಿದ ಭಾರತೀಯ ವೈದ್ಯರೊಬ್ಬರು ಮೊನ್ನೆ ನಮ್ಮ ಮನೆಗೆ ಬಂದಿದ್ದರು. ಅವರ ಮುಖದಲ್ಲಿ ಗೆಲುವೇ ಇರಲಿಲ್ಲ. "ಯಾಕ್ರಿ?" ಅಂದೆ. "ಮತ್ತಿನ್ನೇನು? ಅರಶಿನ ಕಾಮಾಲೆ ಅಂತ ಅವನ ಬಾಯಿಗೆ ಆರು ತಿಂಗಳಿಂದ ಔಷಧಿ ಹುಯ್ದದ್ದೂ ಹುಯ್ದದ್ದೇ, ನಾನು! ಕಡೆಗೆ ನಿನ್ನೆ ಗೊತ್ತಾಯಿತು, ಅವನು ಚೈನಾದೇಶದವನು, ಅಂತ" ಅಂದರು.

* *

ಪ್ರಶ್ನೆ—ಓದು ಮುಗಿಸಿ ನಿಮ್ಮ ಮಗ ಏನಾಗುತ್ತಾನೆ, ಗೌಡರೇ?

ಉ—ಮುದುಕನಾಗುತ್ತಾನೆ.

—o—



ಸತ್ಯಕ್ಕೆ ಬೆನ್ನು ತಿರುಗಿಸದವರು!

"ಹಾಳು ಛತ್ರಿ ಎಲ್ಲಿ ಮರತೆ?—"

ನವೀನ ಗಾದೆಗಳು

“ ರಷ್ಯನರದು ”

ಮಾತು ಬಲ್ಲವಗೆ ಯುದ್ಧವಿಲ್ಲ—ಯುದ್ಧ ಬಲ್ಲವಗೆ ಮಾತೇ ಇಲ್ಲ.

✤ ✤ ✤

ನೀವು ನೀವೇ ಒಂದು—ನಿಮ್ಮನ್ನ ಸೇರಿದ ನಾವೇ ಒಂದು.
(ರಷ್ಯನರ ಸಾಮೂಹಿಕ ಗಾದೆ.)

✤ ✤ ✤

ತೋಣಜಿ ಹೊಕ್ಕ ನಾಯಿನ ಹಾಗೆ ಏನು ಬಂತು ಇನ್ನು ಮೇಲೆ,
—ರಷ್ಯನ್ ಬಿದ್ದ ಜರ್ಮನನ ಹಾಗೆ ಎನ್ನಿ.

✤ ✤ ✤

ಬಡ ರಷ್ಯನನಿಗೂ ಇಜ್ಜೋಡಿ ತುಪಾಕಿ.

✤ ✤ ✤

ಮನೆಗೆ ಹೋಗಿ ಕೇಳಿದರೆ ಮಧ್ಯಸ್ತಿಕೆಗೆ ಒಪ್ಪದವರು,
—ಹೇಳಿಕಳುಹಿಸಿದರೆ ಹ್ಣು ಎನ್ನುತ್ತಾರೆಯೇ?

✤ ✤ ✤

ಅಪ್ಪನ ಕೂಡಿ ಯುದ್ಧಮಾಡಿದರೇನು, ಅಮ್ಮನ ಕೂಡಿ ಯುದ್ಧಮಾಡಿದರೇನು—ಜರ್ಮನ ಬಿದ್ದಿದ್ದೆಲ್ಲಾ ಒಂದು.

✤ ✤ ✤

“ ಜರ್ಮನ್ನಾಸ್ತಿ ಕಾರಸ್ತೆ ಮಾಫಲೇಷು ಕದಾಚನ ”
(ರಷ್ಯನರ ಗೀತಾವಾಕ್ಯ)

✤ ✤ ✤

ಜರ್ಮನರೇನೊ ಕರಡಿ ಹಿಡಿದುಕೊಂಡರು
—ಈಗ ಕರಡಿ ಮಾತ್ರ ಬಿಡೋದಿಲ್ಲ.

✤ ✤ ✤

ಜರ್ಮನ್ನ ಮರಣಾಗುವರೆಗೂ ಮನೆಯನ್ನು ಮರೆತೇ ಬಿಡು. (ಇತ್ಯಮರಃ)

ಬಾಧಕವಿಲ್ಲ

ಸಲಹೆ ಕೇಳುವವರು ಪ್ರಪಂಚದಲ್ಲಿ ಅನೇಕ ಜನ. ಕೊಡುವುದಕ್ಕೆ ಸಿದ್ಧರಾಗಿರುವವರೂ ಅನೇಕವೇ. ಆದರೆ ಎಲ್ಲಾ ಆಧಾರ ವಿಧಾನಗಳನ್ನೂ ಪರಿಶೀಲಿಸಿ, ಸಾವಧಾನ ಚಿತ್ತದಿಂದ ಆಲೋಚಿಸಿ, ಮನವೊಪ್ಪುವಂತೆ ಉಚಿತವಾದ ಸಲಹೆ ಕೊಡುವವರು ಅತ್ಯಂತ ವಿರಳವೆಂದೇ ಹೇಳಬೇಕು. ಅದಕ್ಕೇ ನಮ್ಮ ಸುಬ್ಬಯ್ಯನವರು ಎಂದರೆ ಎಲ್ಲರಿಗೂ ಅಷ್ಟು ಮರ್ಯಾದೆ, ಪ್ರೀತಿ. ಅವರ ಹಾಗೆ ಎಲ್ಲವನ್ನೂ ವಿಚಾರಿಸಿ ಸೂಕ್ತವಾದ ಸಲಹೆ ಕೊಡುವವರನ್ನು ದಶದಿಕ್ಕುಗಳನ್ನು ಶೋಧಿಸಿದರೂ ಸಿಕ್ಕುವುದಿಲ್ಲ. ಸುಬ್ಬಯ್ಯನವರಾದರೋ ಸಕಲವನ್ನೂ ತಿಳಿದವರೆಂದು ಹೆಸರುವಾಸಿಯಾದವರು. ಲೌಕಿಕವಾಗಲಿ, ವೈದಿಕವಾಗಲಿ, ಶಾಸ್ತ್ರವಾಗಲಿ, ಪುರಾಣವಾಗಲಿ, ವೈದ್ಯವಾಗಲಿ, ಜ್ಯೋತಿಷವಾಗಲಿ ಎಲ್ಲದರಲ್ಲಿಯೂ ಎತ್ತಿದ ಕೈ. ಅವರ ವೈಶಿಷ್ಟ್ಯವು ಸುಮ್ಮನೆ ಹೇಳಿದರೆ ಅರ್ಥವಾಗದು. ಕೆಲವು ಉದಾಹರಣಗಳನ್ನು ಕೊಟ್ಟರೇನೆ ಮಂದಟ್ಟಾಗಬೇಕಾದರೆ.

ಒಂದು ದಿನ ಗಾಣಿಗರ ತಿಪ್ಪಯ್ಯನು ಬಂದು ಕೇಳಿದನು. "ಸುಬ್ಬಯ್ಯನವರೇ, ಒಂದು ವಿಚಾರ ನಿಮ್ಮಲ್ಲಿ ಆಲೋಚನೆ ಮಾಡುವುದಿತ್ತು. ನಾನೂ ಎಷ್ಟೆಷ್ಟೋ ಯೋಚನೆ ಮಾಡಿದೆ, ಏನೂ ಬಗೆಹರಿಯಲಿಲ್ಲ. ತಮ್ಮನ್ನೇ ಕೇಳಿಬಿಡೋಣವೆಂದು ಬಂದೆ. ಪುರಸತ್ತಿದೆಯೆ ?"

"ಓಹೋ, ಪುರಸತ್ತಿಲ್ಲದೆ ಏನಪ್ಪಾ ! ಏನು ವಿಚಾರ ?"

"ಇದೇ ನಮ್ಮ ಹುಡುಗ ರಂಗಪ್ಪನದು. ಅವನು ಮೊನ್ನೆ ಲೋವರ್ ಸೆಕೆಂಡರಿ ಪರೀಕ್ಷೆಗೆ........"

"ಹೌದು, ತೇರ್ಗಡೆಯಾಗಿಯೇ ಬಿಟ್ಟನೆಂದು ಕೇಳಿದೆನಲ್ಲ ! ಬಹಳ ಸಂತೋಷವಯ್ಯಾ, ಬಹಳ ಸಂತೋಷ. ಮುಂದಕ್ಕೇನೆಂದು ಯೋಚನೆ ಮಾಡಿರುವಿ ?"

"ಅದೇ ವಿಷಯವೇ, ಶಾಸ್ತ್ರಿಗಳೇ, ತಮ್ಮನ್ನ ಕೇಳುವುದಕ್ಕೆ ಬಂದಿದ್ದು. ಎಷ್ಟು ಬೇಗ ತಾವು ನಾನು ಬಂದ ವಿಚಾರವನ್ನು ಊಹಿಸಿಬಿಟ್ಟಿರಿ ! ಅದಕ್ಕೇ ಅಲ್ಲವೆ ನಾವೆಲ್ಲ ನಿಮ್ಮ ಹತ್ತಿರಕ್ಕೆ ಬರುವುದು—ಸಂಕಟ ಬಂದರೆ ವೆಂಕಟರಮಣ ಎಂದು."

"ಈಗ ಏನಾಗಬೇಕಾಗಿದೆ, ತಿಪ್ಪಯ್ಯ ?"

'ಆ ಹುಡುಗನ್ನ ನೋಡಿ, ಶಾಸ್ತ್ರಿಗಳೇ, ಮುಂದಕ್ಕೆ ಯಾವುದಕ್ಕೆ ಹಾಕಬೇಕೋ ತಿಳಿಯದಾಗಿದೆ. ನನ್ನ ಹೆಂಡತಿ, ನಮ್ಮಪ್ಪ ಇವರೆಲ್ಲ ಅವನನ್ನ ನಮ್ಮ ಕುಲದ ಕಸಬಿಗೇ ಹಾಕಬಿಡಬೇಕು ಎಂದು ಹೇಳುತ್ತಾರೆ. ಏನೋ ಎರಡಕ್ಷರ

ಕಲಿತಿದ್ದು ಸಾಕು, ಇನ್ನು ಕಸಬು ಮಾಡಲಿ, ಓದಿದರೆ ಪೋಲಿ ಬಿದ್ದುಬಿಟು ಕೆಲಸಕ್ಕೆ ಕೈ ಹಾಕವೆ ಹೋಗಬಹುದು ಎಂದು ಅವರು, ನಮ್ಮಯ್ಯ, ನಮ್ಮ ಭಾವ ಇವರೆಲ್ಲ ಹುಡುಗ ಬುದ್ಧಿವಂತ, ಇನ್ನೂ ಓದಲಿ, ಮುಂದಕ್ಕೆ ಬರಲಿ, ಬಿ.ಎ. ಪ್ಯಾಸಾಗಲಿ, ಸರ್ಕಾರಿ ಚಾಕರೀನೋ, ಲಾಯರಗಿರೀನೋ ಮಾಡಲಿ ಅಂತ ಅವರೆಲ್ಲ. ಮಿಕ್ಕ ನಮ್ಮ ಜನಗಳಲ್ಲಿ ಕೆಲವರು ಹಾಗೆ, ಕೆಲವರು ಹೀಗೆ ಹೇಳುತ್ತಾರೆ. ಹೇಗೆ ಮಾಡಬೇಕೋ ಗೊತ್ತಾಗಲಿಲ್ಲ........"

"ಹಾಗೋ! ಹೌದು ತಿಪ್ಪಯ್ಯ, ಇಂಥಾ ವಿಚಾರಗಳಲ್ಲಿ, ನಿರ್ಧಾರ ಮಾಡುವುದೇನು ಸುಲಭವಲ್ಲ, ಈಗ ನೋಡು, ಹುಡುಗನೇನೋ ಲೋವರ್ ಸೆಕೆಂಡರಿ ಮಾಡಿಬಿಟ್ಟಿದ್ದಾನೆ. ಹದಿನೆಂಟು ವರ್ಷ—ಅಂದರೆ, ಇನ್ನೂ ಅಂಥಾ ದೊಡ್ಡ ವಯಸ್ಸೇನೂ ಅಲ್ಲ. ಕಸಬಿಗೇನೋ ಹಾಕಬಹುದು. ಕುಲಕ್ಕೆ ಬಂದ ಕಸಬು. ತಾತ ಮುತ್ತಾತರ ಕಾಲದಿಂದ ಗೌರವ ಜೀವನಕೊಟ್ಟಿರುವಂತಾದ್ದು. ಅವನೂ ಅದನ್ನೇ ಮಾಡಬೇಕಾದದ್ದು ನ್ಯಾಯವೇ. ಆದರೆ, ಮುಂದಕ್ಕೆ ಓದಿಸಬೇಕು ಎನ್ನುವುದೂ ನ್ಯಾಯವೇ! ಈಗಿನ ಕಾಲದಲ್ಲಿ ಓದಿ ಪ್ಯಾಸು ಮಾಡಿದರೆ ನಿಮಗೆಲ್ಲಾ ತಕ್ಕ ಪ್ರತಿಫಲ ಇದ್ದೇಇದೆ. ಸಾಧಾರಣ ಸರ್ಕಾರಿ ಚಾಕರಿ, ಯಾಕೆ ಮಂತ್ರಿ ಕೂಡ ಆಗಿಹೋಗಿ ಬಿಡಬಹುದು. ತಿಪ್ಪಯ್ಯ, ಮಂತ್ರಿ ಕೂಡ ಆಗಿ ಹೋಗಬಹುದು! ರಂಗಪ್ಪ ಅಂಥಾ ದೊಡ್ಡ ಹುದ್ದೆಗೆ ಬಂದುಬಿಟ್ಟರೆ, ಆಗ ನನ್ನ ನಿನ್ನ ಹಿಡಿಯುವವರು ಯಾರು? ಅಂದರೆ ನೋಡು, ಚೆನ್ನಾಗಿ ಓದಬೇಕು, ಅವನು ಪ್ಯಾಸ್ ಮಾಡಬೇಕು. ಅದೇ ಇರುವುದು! ಅದು ಹಾಗಿರಲಿ. ನೀನು ಅವರಿವರ ಅಭಿಪ್ರಾಯಗಳನ್ನೆಲ್ಲಾ ಹೇಳಿಬಿಟ್ಟೆಯಲ್ಲಾ, ನಿನ್ನ ಸ್ವಂತ ಅಭಿಪ್ರಾಯವೇನು?"

"ನನಗೆ ನೋಡಿ, ಒಂದು ಕಡೆ ಓದಲಿ ಅಂತ, ಇನ್ನೊಂದು ಕಡೆ ಕಸಬು ಮಾಡಲಿ ಅಂತ. ಎಂಟಾಣೆ ಹೀಗೆ, ಎಂಟಾಣೆ ಹಾಗೆ ಆಗಿಬಿಟ್ಟಿದೆ."

"ಅದು ಪ್ರಯೋಜನವಿಲ್ಲವಯ್ಯ, ಯಾವುದಾದರೂ ಒಂದನ್ನು ಒಂಭತ್ತಾಣೆಗೆ ಏರಿಸಲೇ ಬೇಕು. ಆಗಲ್ಲವೇ ಇದರ ತೀರ್ಮಾನ!"

"ಹೌದು, ಶಾಸ್ತ್ರಿಗಳೆ, ಇದರ ಮರ್ಮ ನನಗೆ ತಿಳಿಯಲೇ ಇಲ್ಲವಲ್ಲ! ಸರಿ, ಸರಿ, ಯಾವುದಾದರೂ ಒಂದನ್ನು ಒಂಭತ್ತಾಣೆಗೆ ಏರಿಸಿಬಿಡಬೇಕು. ಆದರೆ........ ಯಾವುದನ್ನ ಏರಿಸಬೇಕೂಂತ........"

"ನೋಡು, ನಿನ್ನ ಕಸಬಿನ ವಿಚಾರ ನಿನಗೆ ಗೊತ್ತು. ಚಾಕರಿ ವಿಚಾರ ನಾನು ಹೇಳಬಲ್ಲೆ. ಪ್ಯಾಸು ಮಾಡಿ ಸರ್ಕಾರಿ ಕೆಲಸಕ್ಕೆ ಸೇರಿದ ಅಂದರೆ, ಏನಿಲ್ಲ ಅಂದರೂ ಒಂದಿನ್ನೂರು ರೂಪಾಯಿಗಳಾದರೂ ಸಂಬಳ ಸಿಗುತ್ತೆ. ಅದು ಐನೂರಾದರೂ ಆಗಬಹುದು, ಸಾವಿರವಾದರೂ ಆಗಬಹುದು. ಇದರ ಮೇಲೆ ಹಾಗೆ ಹೀಗೆ ಮಾಡಿ ಅದೃಷ್ಟವಶಾತ್ ಮಂತ್ರಿ ಕೆಲಸ ಹೊಡೆದುಬಿಟ್ಟರೆ, ತೆಗೆದುಕೊ

ಎರಡು ಸಾವಿರ ರೂಪಾಯಿ ಸಂಬಳ!—ಸುಲಭವಾಗಿ ಕನಿಷ್ಠಪಕ್ಷ ಒಂದು ಲಕ್ಷ ರೂಪಾಯಿ ಆಸ್ತಿ!—ಮೇಲಿನ ವಿಚಾರ ನಾನು ಹೇಳಲಾರೆ—ಅದು ಐವತ್ತು ಲಕ್ಷವಾದರೂ ಆಗಬಹುದು—ಅದೆಲ್ಲಾ ಅವನ ಛಾಲೂಕಿನ ಮೇಲೆ ಹೋಗುತ್ತೆ.... ನೋಡು, ಯೋಚನೆ ಮಾಡು."

"ಶಾಸ್ತ್ರಿಗಳೇ, ನನಗೂ ಯಾಕೋ ಇದೆಲ್ಲಾ ನೀವು ಹೇಳಿದ ಮೇಲೆ ನಮ್ಮ ಗಾಣಿಗರ ಕಸುಬಿಗಿಂತ ಮಂತ್ರಿ ಕೆಲಸಾನೇ ವಾಸಿ ಅಂತ ತೋರುತ್ತೆ. ದುಡೀ ಬೇಕಾದ್ದೂ ಕಡಿಮೆ—ದುಡ್ಡೂ ಹೆಚ್ಚು........ರಂಗಪ್ಪನ್ನ ಮುಂದಕ್ಕೆ ಓದಿಸಿಯೇ ಬಿಡೋಣ ಅನ್ನಿಸುತ್ತೆ. ತಮ್ಮ ಸಲಹೆ ಹ್ಯಾಗೆ?—ಹುಡುಗ ಏನೂ ಪರವಾಗಿಲ್ಲ—ಲೋವರ್ ಸೆಕೆಂಡರೀನ ಎರಡನೇ ಸಲಕ್ಕೇ ಹೊಡೆದುಬಿಟ್ಟ ಅನ್ನುವುದನ್ನು ಮರೆಯ ಬೇಡಿ. ಅವನ ಜೊತೆಗಾರ ಶಿಂಗಯ್ಯ ಈ ಸಲ ಮೂರನೇ ಸಲವೂ ಫಳ್ಟಿ!—ಓದಿಸಿಯೇ ಬಿಡೋಣ ಅನ್ನಿಸುತ್ತೆ. ಏನು ಹೇಳುತ್ತೀರಿ?"

"ನಿನ್ನ ಮನಸ್ಸು ಖಂಡಿತ ತಾನೆ, ತಿಪ್ಪಯ್ಯ?"

"ಓಹೋ!"

"ಹಾಗಾದರೆ"—(ಎಂದು ಒಂದೆರಡು ನಿಮಿಷ ಕಣ್ಣು ಮುಚ್ಚಿ ಆಲೋಚಿಸಿ) —"ಹಾಗಾದರೆ ತಿಪ್ಪಯ್ಯ, ಓದಿಸಿಯೇ ಬಿಡು—ಬಾಧಕವಿಲ್ಲ!"

"ಪರವಾಯಿಲ್ಲವೋ, ಶಾಸ್ತ್ರಿಗಳೇ?"

"ಬಾಧಕವಿಲ್ಲವಪ್ಪಾ, ಬಾಧಕವಿಲ್ಲ!"........

ರಂಗಪ್ಪನು IV ಫಾರಂನಲ್ಲಿ ಆಗಲೇ ಎರಡು ಸರ್ತಿ ಆಯಿತು—ಫಳ್ಟಿ! ಅವನ ಜೊತೆಗಾರ ಶಿಂಗಯ್ಯನನ್ನು ಮೀರಿಸುವುದರಲ್ಲಿದಾನೆ. ಆದರೆ, ತಿಪ್ಪಯ್ಯ ನೇನೋ ಹೇಳುತ್ತಾನೆ. ಸುಬ್ಬಯ್ಯನವರು ಹೇಳಿದ್ದಾರೆ—ಬಾಧಕವಿಲ್ಲ!"

* * *

"ಏನು ಶೆಟ್ರೇ, ಇಷ್ಟು ದೂರ! ಏನು ಸಮಾಚಾರ?"

"ತಮ್ಮನ್ನೇ ನೋಡುವುದಕ್ಕೆ ಬಂದೆ, ಸುಬ್ಬಯ್ಯನವರೆ. ಇವತ್ತು ಬೊಂಬಾ ಯಿಗೆ ಹೋಗಬೇಕಾಗಿದೆ. ಪ್ರಯಾಣಕ್ಕೆ ದಿನ ಚೆನ್ನಾಗಿದೆಯೇ ಕೇಳಿಕೊಂಡು ಹೋಗೋಣ ಎಂದು ಬಂದೆ—ಹಾಗೇ ಒಂದು ಪ್ರಶ್ನೆ ಕೂಡ ಇತ್ತು; ಹೋಗುವ ಕೆಲಸ ಲಾಭವೆ, ಸೊನ್ನೆಯೆ ಅನ್ನುವ ವಿಚಾರದಲ್ಲಿ........"

"ಅಯ್ಯೋ, ಅದಕ್ಕೇನು. ಇಪ್ಪತ್ತೇಳರಲ್ಲಿ ಒಂದು ಸಂಖ್ಯೆ ಹೇಳು"

"ಎಂಟು"

ಸ್ವಲ್ಪ ಹೊತ್ತು ಬೆರಳುಗಳನ್ನು ಮಡಿಸಿ ತೆಗೆದು ಮಾಡುತ್ತಾ ಪಿಟಪಿಟ ಎಂದು ಏನೋ ಹೇಳಿ........

"ಈವತ್ತೇ ಹೊರಡಬೇಕೆ?"

"ಹೌದು, ಇಲ್ಲದಿದ್ದರೆ ಪ್ರಯೋಜನವೇ ಇಲ್ಲ, ಶಾಸ್ತ್ರಿಗಳೇ"

"ಸರಿ, ಸರಿ." ಮತ್ತಷ್ಟು ಗುಣಿಸಿ "ಬಾಧಕವಿಲ್ಲ, ಶೆಟ್ಟಿ, ಬಾಧಕವಿಲ್ಲ!"

"ಹಾಗಾದರೆ, ಇವತ್ತು ಹೊರಡಲೋ, ಪರವಾಯಿಲ್ಲವೊ?"

"ಹೋಗಲೇಬೇಕು ತಾನೆ? ಬಾಧಕವಿಲ್ಲ!"........

ಆ ದಿನವೇ........ರಿನ ಹತ್ತಿರ ರೈಲ್ವೆ ಅನಾಹುತವಾದದ್ದು. ಶೆಟ್ಟಿಗೆ ಎಂಟು ಸಾವಿರ ರೂಪಾಯಿ ನಷ್ಟವಾಗಿ, ಒಂದು ಕಾಲು ಮುರಿದುಹೋದರೂ ಪ್ರಾಣ ಉಳಿಯಿತು. ಅವನೇನೋ ಇವತ್ತು ನಾಳೆಗೂ ಹೇಳುತ್ತಿರುತ್ತಾನೆ. "ದೇವರ ದಯದಿಂದ ಉಳಿದುಕೊಂಡೆ. ನಮ್ಮ ಮುಂದಿನ ಗಾಡಿ ಪುಡಿಪುಡಿಯಾಗಿಹೋಯ್ತು. ನಮ್ಮ ಗಾಡಿ ಅರ್ಧಮಾತ್ರ ಹೋಯಿತು. ಆದರೆ, ಮೊದಲೇ ಹೇಳಿದ್ದರು ನಮ್ಮ ಸುಬ್ಬಯ್ಯನವರು 'ಬಾಧಕವಿಲ್ಲ' ಎಂದು, ಇಲ್ಲದಿದ್ದರೆ, ಇಷ್ಟುಹೊತ್ತಿಗೆ ಪರಲೋಕದಲ್ಲಿರುತ್ತಿದ್ದೆ."

✣ ✣ ✣

"ಸುಬ್ಬಯ್ಯನವರೇ! ನಮ್ಮ ಹುಡುಗಿ ಸಾತೂಗೆ ಈ ವರ್ಷ ಲಗ್ನವಾಗಬೇಕು. ವರನ ಜಾತಕವನ್ನೂ ಅವಳ ಜಾತಕವನ್ನೂ ತಂದಿದೇನೆ. ಸರಿಹೋಗುತ್ತೆಯೋ ಸ್ವಲ್ಪ ನೋಡಿ ಹೇಳಬೇಕು."

"ಸಾವಿತ್ರಿಗೆ ಮದುವೆ ನಿಷ್ಕರ್ಷೆಯಾಯಿತೆ? ಬಹಳ ಸಂತೋಷ, ಸ್ವಾಮಿ, ಬಹಳ ಸಂತೋಷ."

"ನೀವು ಜಾತಕಗಳು ಕೂಡುತ್ತವೆ ಎಂದರೆ ನಿಷ್ಕರ್ಷೆಯಾದಂತೆಯೇ"

"ಜಾತಕ ಹಾಗಿರಲಿ, ಅದನ್ನು ನನಗೆ ಬಿಡಿ........ಸಂಬಂಧ ನಿಮ್ಮಗಳಿಗೆಲ್ಲಾ ಒಪ್ಪಿಗೆಯೋ?"

"ಓಹೋ, ನಾವೆಲ್ಲಾ ಒಪ್ಪಿದ್ದೇವೆ. ಜಾತಕಗಳು ಸರಿಹೋಗಬೇಕು, ಹುಡುಗ ಒಬ್ಬ ಒಪ್ಪಬೇಕು, ಅಷ್ಟೆ. ಮುಖ್ಯವಾಗಿ ಈಗ ಜಾತಕದ್ದು ಹೇಳಿ."

"ಅದಕ್ಕೇನು, ಕೊಡಿ ಇಲ್ಲಿ." ತೆಗೆದುಕೊಂಡು ಲೆಖ್ಖ ಹಾಕುತ್ತಾ,

"ಲಗ್ನ ಈ ವರ್ಷವೇ ನಡೆದು ತೀರಬೇಕೊ?"

"ಖಂಡಿತವಾಗಿಯೂ. ಹದಿನಾರು ತುಂಬಿತು ಇನ್ನು ಸಾವಕಾಶ ಸಾಧ್ಯವಿಲ್ಲ"

ಗುಣಾಕಾರಗಳನ್ನೆಲ್ಲಾ ಮಾಡಿ "ಬಾಧಕವಿಲ್ಲ, ದೇವರು!"

"ಕೂಟಗಳೆಲ್ಲಾ ಸರಿಯಾಗಿ ಸೇರುತ್ತವೆಯೋ, ಸುಬ್ಬಯ್ಯನವರೆ?"

"ಮೈತ್ರ ಕೂಟ, ನಾಡೀಕೂಟ ಇವೆರಡೂ ಅಷ್ಟೇನು ಪ್ರಶಸ್ತವಾಗಿವೆ ಯೆಂದು ಹೇಳಲಾರೆ. ಆದರೂ ಬಾಧಕವಿಲ್ಲ. ಉತ್ತರೋತ್ತರ ಚೆನ್ನಾಗಿರುತ್ತೆ!"....

ಮದುವೆ ನಡೆಯಿತು. ಸಾವಿತ್ರಿ ಈಗ ಆರು ತಿಂಗಳುಗಳಿಂದ ಹತ್ತು ಸಾವಿರ ರೂಪಾಯಿಗಳಿಗೆ ಅಧಿಕಾರಿಣಿ! (ಅವಳ ಗಂಡ ಅಷ್ಟಕ್ಕೇ ಜೀವ ವಿಮೆಮಾಡಿದ್ದುದು). ಅವಳ ತಂದೆ ಆಗಾಗ್ಯೆ ಜ್ಞಾಪಿಸಿಕೊಳ್ಳುತ್ತಿರುತ್ತಾನೆ. "ಸುಬ್ಬಯ್ಯನವರು ಆಗಲೇ ಹೇಳಿದ್ದರು. ಒಂದೆರಡು ಕೂಟ ಪ್ರಶಸ್ತವಾಗಿಲ್ಲದಿದ್ದರೂ, ಉತ್ತರೋತ್ತರ ಚೆನ್ನಾಗಿರುತ್ತೆ, ಬಾಧಕವಿಲ್ಲ ಎಂದು"........

✤ ✤ ✤

"ಕೊರವಂಜಿ" ಸಂಪಾದಕರಲ್ಲಿ ವಿಜ್ಞಾಪನೆಗಳು,

ಸುಬ್ಬಯ್ಯನವರ "ಬಾಧಕವಿಲ್ಲ" ಮಂತ್ರವು ಅನೇಕ ಸಲಹೆಗಾರರಿಗೂ ಉಪದೇಶ ಹೇಳುವವರಿಗೂ ಗೊತ್ತಿಲ್ಲದಿರಬಹುದು. ತಮ್ಮ ಪತ್ರಿಕೆಯ ಮುಖಾಂತರ ಪ್ರಚುರವಾದರೆ, ಅವರಿಗೆಲ್ಲಾ ತಿಳಿದು, ಈ ಪ್ರಪಂಚದ ಸಮಸ್ಯೆಗಳನ್ನು ಪರಿಹರಿಸಲು ಸಾಧಕವಾಗಬಹುದೆಂಬುದೇ ನನ್ನ ಆಶೆ. ಒಂದು ವೇಳೆ ಆಗದಿದ್ದರೆ—ಬಾಧಕವಿಲ್ಲ!"

ತಮ್ಮ ವಿಶ್ವಾಸಿ,
ಬೀರಣ್ಣ.

ಅಹಮದ್‌ನಗರದಲ್ಲಿ ಸ್ನೇಹಪ್ರಭಾ ಎಂಬ ಸುಪ್ರಸಿದ್ಧ ತಾರೆಯ ನಾಟ್ಯ ಪ್ರದರ್ಶನ ಅರ್ಧದಲ್ಲೇ ನಿಂತುಹೋಯಿತಂತೆ. ಪುರಜನರೂ, ಪೋಲೀಸಿನವರೂ "ಗ್ರೀನ್ ರೂಂ"ಗೆ ನುಗ್ಗಿದ್ದರಿಂದ ಆಕೆಗೆ ಉಡುಪು ಬದಲಾಯಿಸಲು ಸ್ಥಳವೇ ಸಿಗಲಿಲ್ಲವಂತೆ!

ಏಕೆ ಸಭಾಮಂದಿರ ಖಾಲಿಯಾಗಿತ್ತಲ್ಲ?

ತುಲಸೀದಳ

ರಾಮರಾಯರಿಂದ ಬೆಳಗ್ಗೆ ಪತ್ರ ಬಂತು. ನಾನು ಹೆದರಿದಂತೆಯೇ ಆಯಿತು. ಇಷ್ಟು ಬೇಗ ಇಂತಹ ಕಾಗದವನ್ನು ನಾನು ಅವರಿಂದ ನಿರೀಕ್ಷಿಸಿರಲಿಲ್ಲ. ಹತ್ತು ದಿನ ತಡವಾದೀತು, ತಿಂಗಳುಗಳುರುಳೀತು ಎಂದಿದ್ದೆ. ಆದರೆ, ಅವರಿಗೆ ಮಲೇರಿಯ ಬಂದೇ ಬಂತಂತೆ. ೧೦೩, ೧೦೪ರ ತನಕ ಆತನನ್ನ ಎಳೆದುಕೊಂಡು ಹೋಗಿ ಏರಿಸಿ ಮತ್ತೆ ೯೮ಕ್ಕೆ ಇಳಿಸಿ ತುಂಬಾ ತ್ರಾಸ ಕೊಟ್ಟಿತಂತೆ. ಸದ್ಯಕ್ಕೆ ಹುಷಾರಾಗಿದೇನೆ, ಅಂತ ಬರೆದಿದಾರೆ. ಆದರೆ, ನಾನದನ್ನು ನಂಬುವುದೇ ಇಲ್ಲ. ಹತ್ತಾರು ಸಲ ಅವರಿನ್ನು ೧೦೩, ೧೦೪ರ ತನಕ ಹತ್ತಬೇಕಾಗಿ ಬರುತ್ತದೆ. ವಾರಕ್ಕೆರಡು ಸಲವಾದರೂ ಆ ಹಾಳು ಖಾಯಿಲೆ ರಾಯರನ್ನು ಹಿಡಿದು ಹಾಸಿಗೆಯ ಮೇಲೆ ಕುಸಿದು ಬೀಳುವಂತೆ ನೂಕುತ್ತದೆ. ಕೆಲವು ತಿಂಗಳಲ್ಲೇ ಅವರ ಹೊಟ್ಟೆಯಲ್ಲಿ ಪುರುಷ ಗರ್ಭ ಬೆಳೆದು ಅನೀಮಿಯಾಗೆ ತಿರುಗಿ........ಅಯ್ಯೋ! ನಾನಿದನ್ನೆಲ್ಲಾ ರಾಯರಿಗೆ ವಿವರಿಸಿದೆ, ಇಲ್ಲಿಂದ ಹೊರಡುವಾಗಲೇ!

"ಸ್ವಾಮಿ! ಮೈದಾನದಲ್ಲಿ ಬೆಳೆದ ಮೈ, ಇದ್ದಕ್ಕಿದ್ದ ಹಾಗೆ ವರ್ಗವಾಗಿದೆ. ಹುಷಾರಾಗಿರಿ. ನನ್ನ ಮಾತು ಕೊಂಚ ಕಿವಿಗೆ ಹಾಕಿಕೊಳ್ಳಿ..... ನೋಡಿ, ಇಲ್ಲಿ! ದಿನವೂ ಬೆಳಗ್ಗೆ ಎದ್ದ ಕೂಡಲೇ ನಾಲ್ಕು ಡಜನ್ ತುಳಸೀದಳ, ಅಷ್ಟೆ. ಖರ್ಚು ವೆಚ್ಚಾದಿಗಳಿಲ್ಲ. ಮಲೆನಾಡಿನಲ್ಲಿ ತುಳಸೀದಳಕ್ಕೇನೂ ಬರಗಾಲ ಬಂದಿಲ್ಲ. ಶ್ರೀಮನ್ನಾರಾಯಣನ ಕೃಪೆಯಿಂದ" ಅಂತ ಗಿಣಿಗೆ ಹೇಳುವ ಹಾಗೆ ಹೇಳಿದೆ. ಅದಕ್ಕವರು ಏನು ಜವಾಬು ಕೊಟ್ಟರು ಗೊತ್ತೆ?

"ಬಿಡಯ್ಯ! ಬಿಡಯ್ಯ! ನೂರೆಂಟು ಜನ ನೂರೆಂಟು ಔಷಧಿ ಹೇಳಿದರೆ, ನಾನೇನೂ ಅಂತ ತಿನ್ನಲಿ, ಏನೂ ಅಂತ ಕುಡಿಯಲಿ? ನನ್ನದೇನು ಹೊಟ್ಟೆಯೋ, ಹೋಲ್ಡಾಲೋ? ನಿಂಬೆಹಣ್ಣಿನ ಪಾನಕ ಅಂತಾರೆ ಒಬ್ಬರು. ಮಜ್ಜಿಗೆ ಹುಲ್ಲಿನ ಪಾನಕ ಅಂತಾರೆ ಇನ್ನೊಬ್ಬರು. ಟೀ ಸೊಪ್ಪಿನ ಕಷಾಯದಲ್ಲಿ ನಿಂಬೆ ರಸ ಸೇರಿಸಿ ಕಣ್ಣುಮುಚ್ಚಿಕೊಂಡು ಕುಡಿದು ಬಿಡು, ಅಂತಾನೆ ಶಾಸ್ತ್ರೀ. ಸಿಕ್ಕಿದಷ್ಟು ಸಲ ಕಾಫಿ ಕುಡಿ, ಅಂತಾನೆ ಶಂಕರ. ಮಲೆನಾಡಿನಲ್ಲಿ ಬಾಬಾಬುಡರ್ನರವರು ಕಾಫಿ ಬೆಳೆಸಿದ್ದೇ ಇದಕ್ಕಾಗಿ, ಎಂಬುದು ಅವನ ಸಿದ್ಧಾಂತ. ಕಾಫಿ ಅಂಬೋದು ಕಾರ್ಕೋಟಕನ ವಿಷ, ಕಣ್ವ ಮಹರ್ಷಿಗಳ ಶಾಪದಿಂದ ಗಿಡವಾಗಿ ಹುಟ್ಟಿದೆ, ಇಲ್ಲಂತೂ ತುಟಿಗೆ ತಗುಲಿಸಲಿಲ್ಲ, ಅಲ್ಲೂ ಬೇಡ, ಅಂತಾಳೆ ನನ್ನ ಅತ್ತೆ. ಸೇದುಬತ್ತಿಯೇ ಸರಿ ಎಂಬುದು ನಮ್ಮ ಕ್ಲಬ್ಬಿನವರ ಅಭಿಪ್ರಾಯ. ಸಾಮ್ರಾಣಿ ಹೊಗೆ ಯಾವ ಮೂಲೆಗೆ? ಹೊಗೆಸೊಪ್ಪಿನಘಾಟು ಬೀಳಬೇಕು ನೋಡು! ಸಿಗರೇಟಿಗೆ ಬೆಲೆ ಹೆಚ್ಚಾದರೆ ಬೀಡಿಗೆ ಬರಗಾಲವೇ? ಅಂತಾರೆ, ಅವರೆಲ್ಲ. ದಿನವೂ ಬರೀ ಹೊಟ್ಟೆಮೇಲೆ ಸರ ಸರ ಸರ ಅಂತ ನಡೆದುಬಿಡು, ಅಂತಾರೆ

ಮೇಷ್ಟ್ರು. ನನ್ನ ನಡಿಗೆಗಾಗಿ ನಾನು ಯಾರ ಬರೀ ಹೊಟ್ಟೆ ಹುಡುಕಲಿ? ಬೆವರಿದಷ್ಟು ಭಯವಿಲ್ಲ ಅಂತ ಮೇಷ್ಟ್ರು ಅಂದರೆ, ಸುಸ್ತುಮಾಡಿಕೊಳ್ಳಬೇಡ ಅಂತ ಸೋಮು ಸಲಹೆ ಮಾಡುತ್ತಾನೆ. ಆಯಾಸವೇ ಅಪಾಯ, ಸುಸ್ತಿನ ಹಿಂದೆ ಸೊಳ್ಳೆ, ಸ್ವಸ್ಥವಾಗಿ ಈಸೀ ಚೇರಿನ ಮೇಲೆ ಮಲಗಿರು ಅಂತಾನೆ. ಯಾರನ್ನ ನಂಬಲಿ, ಯಾರನ್ನ ಬಿಡಲಿ! ಡಾಕ್ಟರ್ ಹೇಳುತ್ತಾರೆ, "ಸೊಳ್ಳೆ ಅಂತ ನೀನೇನೂ ಹೆದರಬೇಡ. ಶೇಕಡ ೯೯. ಸೊಳ್ಳೆಗಳಿಗೆ ಮಲೇರಿಯಾ ಹರಡಲು ಸಾಮರ್ಥ್ಯವೇ ಇಲ್ಲ. ಅವುಗಳಲ್ಲಿ ನಾನಾ ಜಾತಿಗಳಿವೆ ಅನಾಫಲಿಸ್ ಎಂಬ ಒಂದೇ ಒಂದು ಜಾತಿ, ಅದರಲ್ಲೂ ಆ ಜಾತಿಯ ಹೆಣ್ಣು ಮಕ್ಕಳು ಮಾತ್ರ ಮಲೇರಿಯ ಹೊತ್ತು ತರುತ್ತವೆ. ನೀನು ರಾತ್ರಿ ಎಚ್ಚರವಾಗಿದ್ದು, ಆ ಹೆಣ್ಣು ಸೊಳ್ಳೆಗಳನ್ನು ಮಾತ್ರ ಹುಡುಕಿಹುಡುಕಿ ಕತ್ತು ಕಿವುಚಿ ಕೊಂದುಬಿಡು'' ಅಂತ. ಅಲ್ಲೇ ಕುಳಿತಿದ್ದ ಶಾಸ್ತ್ರಿಗಳು "ಪುಣ್ಯಾತ್ಮ! ಹಾಗೆ ಮಾತ್ರ ಮಾಡಬೇಡ. ಹೆಣ್ಣು ಮಕ್ಕಳ ಕತ್ತು ಕಿವುಚುವುದು ಅಂದರೇನು? ರಾಮು! ನನ್ನ ಮಾತು ಕೇಳು! ಸ್ತ್ರೀ ವಧೆ ಸುತರಾಂ ಮಾಡಬೇಡ. ಅದೂ, ರಾತ್ರಿ ಕಾಲದಲ್ಲಿ! ನಿನ್ನ ಹೆಂಡತಿ ಮಕ್ಕಳು ಸುಖವಾಗಿರಬೇಡವೇನೋ? ತಾಟಕೀನ ಕೊಂದದ್ದಕ್ಕೆ ರಾಮ ಕಾಡಿಗೆ ಹೋಗಬೇಕಾಗಿ ಬಂತು; ಅವನ ಹೆಂಡತಿ ಕೂಡ ಕಾಡಿಗೆ ಹೋದಳು; ತಂದೆಗೂ, ಮಕ್ಕಳಿಗೂ ಯುದ್ಧವಾಯಿತು" ಅಂದರು. "ಗಾಬರಿಗೊಳ್ಳಬೇಡ! ಪರದೆ ಕಟ್ಟಿಕೊಂಡು ಮಲಗು'' ಅಂತ ಭೀಮಣ್ಣ ಹೇಳುವುದರೊಳಗೆ ಅವನ ತಮ್ಮ ಸುಬ್ಬಣ್ಣ, "ಪರದೆ ಎಷ್ಟು ಹೊತ್ತಿನಿಂದ ಎಷ್ಟು ಹೊತ್ತಿನವರೆಗೆ? ಅವರೊಳಕ್ಕೆ ನೀನು ಹೋಗುವತನಕ ಸೊಳ್ಳೆಗಳು ತೂಕಡಿಸುತ್ತಿರುತ್ತವೆಯೇ? ಒಂದು ಬಂದು ಕಚ್ಚಿದರೂ ಸಾಕು, ಗೆಡ್ಡೆ ಬರುತ್ತೆ ಹೊಟ್ಟೆಯಲ್ಲಿ" ಅಂದ. "ಮುಖಕ್ಕೆ ಸೀಮೆಯೆಣ್ಣೆ ಬಳಿದುಕೊ" ಅಂದ ರಂಗನಾಥ ಈ ಲಡಾಪರಿಕಾಲದಲ್ಲಿ ಸೀಮೆಯೆಣ್ಣೆ ಸಂಪಾದಿಸುವುದು ಹೇಗೆ ಅಂತ ನಾನು ಕೇಳುವುದರೊಳಗೆ ಕಿಟ್ಟಣ್ಣ "ಸೀಮೆಯೆಣ್ಣೆ ಅಂತೆ! ಸೀಮೆಯೆಣ್ಣೆ! ಸ್ವದೇಶಿ ಆದರೆ ಸಮ!" ಅಂದ. "ರಾಮರಾಯರೇ! ಸೀಮೆಯೆಣ್ಣೆ ಅಂದರೆ ಬೆಂಕಿ. ಮುಖಕ್ಕೆ ತೊನ್ನು ಗಿನ್ನು ಬಂದೀತು. ದಿನವೂ ನಾಲ್ಕುನಾಲ್ಕು ಕ್ವಿನೀನು ಗುಳಿಗೆ ನುಂಗಿಬಿಡಿ" ಅಂದರು ಸ್ಯಾನಿಟರಿ ಇನ್ಸ್ಪೆಕ್ಟರು. "ಕಿವಿ 'ಕೆಟ್ಟುಹೋಗುತ್ತದಂತಲ್ಲಾ" ಅಂದೆ ನಾನು. "ಕಿವಿಯನ್ನು ಮುಚ್ಚಿ ಹಿಡಿದು, ಗುಳಿಗೆ ನುಂಗುವುದಕ್ಕೆ ಬರೋದಿಲ್ಲವೆ, ನಿಮಗೆ" ಅಂತ ನಕ್ಕುಬಿಟ್ಟರು. ಆಗ, ಜೋಯಿಸರು ಸುಮ್ಮನಿದ್ದರೆ ತಾನೆ? "ದೇವರಿದಾನೆ ಅಲ್ಲಿ, ಮೇಲೆ ಮಹಾರಾಯನ ಹಾಗೆ! ಆತನೇ ಪ್ರತಿಯೊಂದು ಪ್ರಾಣಿಗೂ ಆಹಾರಾದಿಗಳನ್ನು ವಿಧಾಯಕಮಾಡಿರುವನು. ಇಂತಿಂತಹವರ ರಕ್ತಹೀರು ಅಂತ ಆತನೇ ಸೊಳ್ಳೆಗಳಿಗೆಲ್ಲ ಆಜ್ಞಾಪಿಸುವವನು. ಆ ಮಹಾರಾಯನ ಕಣ್ಣು ನಿನ್ನ ಮೇಲೆ ಬೀಳದೆ ಇರುವಹಾಗೆ ನಾನೊಂದು ತಾಯಿತಿ ಕಟ್ಟುತ್ತೇನೆ" ಅಂದರು ಅವರು. ಇದನ್ನ ನಮ್ಮ ನಾಣಿ ಹತ್ತಿರ ಹೇಳಿದೆ. ಅವನಿಗೆ ವಿಪರೀತ ಕೋಪ ಬಂದುಬಿಟ್ಟಿತು. "ಆ ಜೋಯಿಸರಿಗೆ ಒಂದಿಷ್ಟು ಹಗ್ಗ ಕೊಡು!

ನೇಣು ಹಾಕಿಕೊಳ್ಳಲಿ! ಕೊಪ್ಪದ ಸಬ್ ರೆಜಿಸ್ಟ್ರಾರ್ ಮಾಡುತ್ತಿದ್ದ ಉಪಾಯ ವಿದೆಯಲ್ಲಾ ಅದನ್ನೇ ಅನುಸರಿಸು" ಅಂದ. "ಏನದು?" ಅಂದೆ. "ದಿನವೂ ಆರು ಬೆಳ್ಳುಳ್ಳಿ ಅಗಿದು ನುಂಗಿಬಿಡು" ಅಂದ. "ಆ ಬೆಳ್ಳುಳ್ಳಿ ವಾಸನೆಗೆ ಆ ಸೊಳ್ಳೆಗಳೆಲ್ಲ ಸತ್ತೆನೋ, ಕೆಟ್ಟೆನೋ ಅಂತ ಓಡಿಹೋಗುತ್ತವೆ" ಅಂದ ನಾಣಿ. "ಸಂಗೀತದ ಮೇಷ್ಟ್ರು ಬೆಳ್ಳುಳ್ಳಿ ತಿಂದರೆ ಪ್ರೈವೆಟ್ ಟ್ಯೂಷನ್‌ಗಳು ಒಂದೂ ಸಿಗುವುದಿಲ್ಲವಲ್ಲೋ" ಅಂದೆ. "ಸರಿ ಬಿಡು, ಹಾಗಾದರೆ, ನಿನಗೆ ದುಡ್ಡಿನ ಮೇಲೆ ಆಶೆ, ಮಲೇರಿಯಾ ಮೇಲೆ ಭೀತಿ ಅಂದರೆ ನಾನೇನು ಮಾಡುವುದು" ಅಂತ ನಡೆದೇ ಬಿಟ್ಟ. "ಮನೆಯಲ್ಲಿ ಹಲ್ಲಿಗಳು ತುಂಬ ಹರಿದಾಡುತ್ತಿದ್ದರೆ ಒಳ್ಳೆಯದು. ಅವು ಸೊಳ್ಳೆಗಳನ್ನು ತಿಂದು ಹಾಕುವುದರಿಂದ ಅಂತಹ ಮನೆಗಳು ಆರೋಗ್ಯಕ್ಕೆ ಪ್ರಶಸ್ತ ಅಂತ ಈ ಊರಿನ ಹೆಲ್ತ್ ಆಫೀಸರ್ ಹೇಳುತ್ತಾರೆ" ಅಂತ ದೊಡ್ಡ ಮಾವನವರು ಕಾಗದ ಬರೆದಿದಾರೆ. "ಅನ್ನ ಬೇಯಿಸುವ ನೀರಿನಲ್ಲಿ ಐದು ನಿಮಿಷಗಳ ಕಾಲ ಎರಡು ಮೀನುಗಳನ್ನ ಈಜಾಡಿಸಿ" ಅಂತ ಮೆಡಿಕಲ್ ಕಾಲೇಜಿನಿಂದ ನನ್ನ ಮಗನ ಸ್ನೇಹಿತ ಬರೆದಿದಾನೆ. ನೀನು ತುಳಸಿ ತಿನ್ನು ಅಂತಿಯ. ತುಳಸೀದಳವನ್ನು ಚಟ್ನಿ ಮಾಡಬಾರದು ಅಂತ ತುಳಸೀ ರಾಮಾಯಣದಲ್ಲಿ ಹೇಳಿದೆಯಂತೆ, ಆಕೆ ಹೇಳುತ್ತಾಳೆ. ಆಕೆಗೂ ಹಿಂದಿಯಲ್ಲಿ ಪ್ರಾಥಮಿಕ್ ಆಗಿದೆ; ಸರ್ಟಿಫಿಕೇಟ್‌ನ ಹನ್ನೆರಡಾಣೆ ಕೊಟ್ಟು ಕಟ್ಟುಹಾಕಿಸಿ ಮಲೆನಾಡಿಗೂ ತೆಗೆದುಕೊಂಡು ಹೋಗುತ್ತಿದೇವೆ. ತಿಥಿ ವಾರ ನಕ್ಷತ್ರ ನೋಡದೆ ಪೋಲಿ ದನಗಳ ಹಾಗೆ ತುಳಸೀ ತೋಟಕ್ಕೆ ನುಗ್ಗಬಹುದೇ! ಜಗತ್ತಿನಲ್ಲಿರೋ ಪವಿತ್ರ ತರುಮೂಲಗಳನ್ನೆಲ್ಲಾ ಮೇಯುತ್ತಾ ಮೈ ಬೆಳೆಸಿದರೆ ಮುಂದೆ ಯಾವ ಗಾಣವೋ ಯಾವ ಬಾಣಲಿಯೋ?............ಹೋಗೋ! ಹೋಗೋ! ನಾನೇನೂ ಮಾಡುವುದಿಲ್ಲ, ತೆಪ್ಪಗಿದ್ದು ಬಿಡುತ್ತೇನೆ! ಹಣೆಯಲ್ಲಿ ಬರೆದಿದ್ದರೆ ಬರಲಿ" ಅಂತ ಹೇಳಿ, ಹೊರಟೇ ಬಿಟ್ಟರು.

ಹಣೆಯ ಮೇಲೆ ೧೦೩, ೧೦೪ ಅಂತ ಬರೆದೇ ಇತ್ತು.

—ನಾ. ಕ.

ಬಹಳ ಸ್ವಲ್ಪ ಹುಡುಗರಿಂದ ಸ್ಥಾಪಿತವಾದ ಈ ಸಂಸ್ಥೆಯು ಈಗ ಅನೇಕ ಹುಡುಗರಿಂದ ಕೂಡಿರುವುದು ಹೆಮ್ಮೆಯ ವಿಷಯ. (ಶಾಲಾ ಭಾಷಣ)

ನಮ್ಮ ಮನೆ ಕೂಡ ಹಾಗೆಯೇ; ಆದರೆ,............?



"ಬಿಲ್ ಕಳಿಸಿಬಿಡಿ ಸ್ವಾಮಿ ಇದಕ್ಕೆಲ್ಲ............ಕೊಟ್ಬುಬಿಡ್ತೀನಿ.........."

Doctor—"ಬಿಲ್ಲೇ! ಬೇಡಿ ಇನ್ನೂ ಸ್ವಲ್ಪ ಶಕ್ತಿ ಬರ್ಲಿ ಆ ಮೇಲೆ ಬಿಲ್ ನೋಡಿವಿ ರಂತೆ—......."

ತಮ್ಮಯ್ಯನ ಎಮ್ಮೆಗಳು

ನಿರುದ್ಯೋಗದ ವಿಚಾರವಾಗಿ ಎಷ್ಟು ಬರೆದರೂ ಕೊಂಚವೇ. "ನೀವೇನ್ರಿ ಅದನ್ನ ಹಾಸ್ಯಮಾಡಿ ಹೀಯಾಳಿಸಿ ಓಡಿಸಿಬಿಡುತ್ತೀರಿ'' ಎಂದು ನನ್ನ 'ಮೆಚ್ಚುಗ' ರೊಬ್ಬರು ಒಮ್ಮೆ ಹೇಳಿದ್ದುಂಟು. ಹಾಗೆ ಮಾಡುವುದು ಸಾಧ್ಯವಾದರೆ ನಾನು ಕೃತಾರ್ಥನಾದೆ. ಆದರೆ, ನಿರುದ್ಯೋಗ ಪಿಶಾಚಿ ನಗುವಿಗೂ ಜಗ್ಗುವಂತಿಲ್ಲ; ಕೂಗಾಟಕ್ಕೂ ಕಂಬಿ ಕೀಳುವಂತಿಲ್ಲ. ನಿರುದ್ಯೋಗಕ್ಕೆ ಪ್ರತಿಯಾಗಿ ನಮ್ಮಲ್ಲಿ ಕೂಗಾಟಕ್ಕೇನೂ ಕಡಿಮೆಯಿಲ್ಲ. ಗೌರ್ನರುಗಳು ಗೋಳಿಡುತ್ತಾರೆ; ದಿವಾನ್ ಬಹದ್ದೂರುಗಳು ದಿನಬೆಳಗಾದರೆ ದೂರುತ್ತಾರೆ; ಪತ್ರಿಕಾಕರ್ತರು ಪರದಾಡುತ್ತಾರೆ; ವಾಚಾಳರು ವಾಚಾಮಗೋಚರವಾಗಿ ಬೈಯುತ್ತಾರೆ; ಉಪಾಧ್ಯಾಯವರ್ಗದವರು ಉಪದೇಶಮಾಡುತ್ತಾರೆ; ನಿರುದ್ಯೋಗಿಗಳು ನಿಟ್ಟುಸಿರು ಬಿಡುತ್ತಾರೆ. ಎಲ್ಲರೂ ವೇದಿಕೆಯನ್ನು ಮೆಟ್ಟಿ ಮೇಜನ್ನು ಗುದ್ದಿ "ನಿರುದ್ಯೋಗ ಪಿಶಾಚಿಯನ್ನು ದೇಶ ದಿಂದೋಡಿಸಬೇಕು. ಇದು ಕೂಡಲೇ ಆಗಬೇಕು'' ಎಂದು ಕೂಗಾಡುತ್ತಾರೆ. ಇದನ್ನೆಲ್ಲಾ ಕಿವಿಗೆ ತುಂಬಿಕೊಂಡರೆ, ನಿರುದ್ಯೋಗಿಯ ಹಸಿವು ಇಂಗುತ್ತದೆಯೇ? ಆತ ತನ್ನ ಕೈಗಳೆರಡನ್ನೂ ಜೋಡಿಸಿ ನಿಂತು, "ದೇವರೇ! ನೀನೆಲ್ಲಾದರೂ ಇದ್ದರೆ, ನನಗೊಂದು ಚಾಕರಿಯನ್ನು ಅದೆಲ್ಲಾದರೂ ಇದ್ದರೆ, ಕೊಡಿಸು'' ಎಂದು ಬೇಡುತ್ತಿರುವನು. "ಇದ್ದವನಿಗಿಕ್ಕುತ್ತೇನೆ! ಇಲ್ಲದವನನ್ನು ಸುಲಿಗೆ ಮಾಡು ತ್ತೇನೆ'' ಎಂದು ದೇವರೆಲ್ಲೋ ಹೇಳಿರುವನಂತೆ. ಆ ಮಾತನ್ನೇ ಇಂದು ಮಾನ ವನು ನಡೆಯಿಸುತ್ತಿರುವನು.

ನಮ್ಮೂರಿನ ಒಬ್ಬರು ದೊಡ್ಡ ಮನುಷ್ಯರ ಹತ್ತಿರ ನಾನು ಈ ಸಮಸ್ಯೆ ಯನ್ನು ಕುರಿತು ಪ್ರಸ್ತಾಪ ಮಾಡಿದೆ. ಅವರು ನನಗೊಂದು ಪೀಠ ಕೊಟ್ಟು ನನ್ನನ್ನ ಅದರಲ್ಲಿ ಕೂರಿಸಿ, "ಈ ವಿಚಾರವಾಗಿ ನೀವು ಕೇಳುವುದು ನನಗೆ ಆಶ್ಚರ್ಯ! ನಿಮ್ಮ ಮಗನಿಗೆ ನೀವು ಒಂದು ಎಮ್ಮೆ ಕೊಂಡು ಕೊಡಿಸಿದೀರಲ್ಲ (ಅಲ್ಲ, ಈಚೆಗೆ ಇನ್ನೊಂದೆಮ್ಮೇನೂ ತಂದಿದೀರಿ, ಅಲ್ಲವೆ), ಹೂಂ, ಎರಡೆಮ್ಮೆ ಕೊಡಿಸಿದೀರಲ್ಲ, ಅದರಿಂದ ಅವನಿಗೆ ಅನುಕೂಲವಾಗಿಲ್ಲವೇನು? ದಿನಕ್ಕೆಂಟು ಸೇರು ಹಾಲು; ಎರಡು ಸೇರು ತನ್ನ ಉಪಯೋಗಕ್ಕೆ ಅಂತ ಇಟ್ಟುಕೊಂಡರೂ, ಮಿಕ್ಕ ಆರು ಸೇರಿಗೆ ಒಂದೂವರೆ ರೂಪಾಯಿ ಕನಿಷ್ಠಪಕ್ಷ. ಖರ್ಚು ಹೋಗುತ್ತಾ ತಿಂಗಳಿಗೆ ಇಪ್ಪತ್ತೈದು ರೂಪಾಯಿ, ಇದಲ್ಲದೆ ತಿಂಗಳಿಗೆಂಟು ಗಾಡಿ ಗೊಬ್ಬರ ಅಂದರೆ, ಐದು ರೂಪಾಯಿಗೇನೂ ಮೋಸವಿಲ್ಲ. ಗುಮಾಸ್ತೆಗಿರಿಗಿಂತ ಹೆಚ್ಚಾಯಿತಲ್ಲ ಸ್ವಾಮಿ. ಯಾರ ಸವಾರೀನೂ ಇಲ್ಲ; ಯಾವ ವರ್ಗವೂ ಇಲ್ಲ. ಮನೆ ಬಾಗಿಲಲ್ಲೇ ಡಂಗ್ ಡಂಗ್ ಅಂತ ೩೦ ರೂಪಾಯಿ. ತುಂಬಿದ ಮೈ; ದುಂಡಾದ ಕೆನ್ನೆ; ಇಷ್ಟಿಷ್ಟಗಲ ಕಣ್ಣು! ಯಾವ ಕ್ರಿಕೆಟ್ ಆಡಿದರೆ, ಆ ಮೈ ಬಂದೀತು, ಸ್ವಾಮಿ?'' ಅಂದರು........

ನಿಜ! ಅವರು ಹೇಳಿದ್ದು. ನನ್ನ ಮಗನ ದೈಹಿಕ ಬೆಳವಣಿಗೆ ಮಾತ್ರವಲ್ಲ, ಆಧ್ಯಾತ್ಮಿಕ ಬೆಳವಣಿಗೆಯಲ್ಲೂ ಕೂಡ, ಇತರರಿಗೆ ಆದರ್ಶ. "ತಮ್ಮಯ್ಯ! ಬೆಂಗಳೂರಿಗೆ ಹೋಗೋಣ, ಬರ್ತ್ತೀಯಾ?" ಅನ್ನಿ! "ಥೂ! ಥೂ! ನಾನೊಲ್ಲೆ. ಆ ಎಂಜಲು ಬಟ್ಟಲು, ಆ ತಿರುಕರ ಪಿಡುಗ, ಆ ಇದ್ದಿಲು ಗ್ಯಾಸ್ ವಾಸನೆ''— ಅಂತ ಸಹಸ್ರ ನಾಮಾರ್ಚನೆಗೆ ಪ್ರಾರಂಭಿಸಿಬಿಡುತ್ತಾನೆ. "ದನದ ಥಳಿ ಒಳ್ಳೇದು ತಂದು ಸಾಕಿ ಪ್ರದರ್ಶನಕ್ಕೆ ಕಳುಹಿಸಿದರೆ, ರಾವ್‌ಸಾಹೇಬ್ ಬಿರುದು ಬರುತ್ತಲ್ಲೊ" ಅನ್ನಿ. ಥೂ! ಥೂ! ನಾನೊಲ್ಲೆ. ಆ ಶಿಸ್ತು, ಆ ಶಿಂಗಾರ, ಆ ಸತ್ಕಾರ, ಆ ನಮಸ್ಕಾರ'' ಅಂತ ಅದಕ್ಕೂ ಒಂದು ಅಷ್ಟೋತ್ತರವಾದರೂ ಪಠಿಸುತ್ತಾನೆ. "ಲೋ! ಇಷ್ಟು ಹಣ ಸಾಕೇನೋ ನಿನಗೆ? ಕೋಟ್ಯಾಧೀಶ್ವರನಾಗಬೇಡವೇನೋ ನೀನು?" ಅಂತ ನಾನು ಕೀಟಲೆ ಮಾಡಿದರೆ, "ಬಿಡು ಅಪ್ಪಯ್ಯ! ಕೋಟ್ಯಾಧೀಶ್ವರರಿಗೆ ಕೋಟಲೆಗಳಿಲ್ಲವೆ? ಶಾಂತಿ ಇದ್ದವನಿಗೆ ಸುಖ! ಉಳಿದದ್ದೇನಿದ್ದರೇನು?" ಅಂತ ನಕ್ಕುಬಿಡುವನು.

ಅವನಿಗೇನು, ವಿದ್ಯೆ ಇಲ್ಲ ಅಂತಲ್ಲ! ಎಕನಾಮಿಕ್ಸ್ ಆನರ್ಸ್! ಕ್ರಿಕೆಟ್‌ನಲ್ಲಿ ಅವನ ಕಾಲೇಜ್ ಎ ಟೀಮಿನ ಕ್ಯಾಪ್ಟನ್. ಟೆನ್ನೀಸು, ಸಿಗರೇಟು, ಟಾಕಿ, ಎಲ್ಲವೂ ಆಗಿದೆ.

ಇದೇನು ಸೋಜಿಗ ಅಂತೀರೋ? ತಂದೆ ತಾಯಿಗಳೆಲ್ಲ ತಿಳಿದಿರಬೇಕಾದ ತಂತ್ರ ಇದು. ಈಗಿನ ಸಂದಿಗ್ಧ ಸಮಯದಲ್ಲಂತೂ ಅವರಿಗೆ ಈ ತಿಳಿವಳಿಕೆ ಅತ್ಯವಶ್ಯಕ........ನಿಧಾನವಾಗಿ ಓದಿಕೊಳ್ಳಿ.

ತಮ್ಮಯ್ಯನಿಗೆ ಎಮ್ಮೆ ಕೊಡಿಸುವುದಕ್ಕೆ ಮೊದಲೇ, ನಾನು ಜಾರಿಗೆ ತಂದ ಒಂದು ಕ್ರಮವೇ ಅವನ ಹೊಸ ಜೀವನದ ಅಡಿಪಾಯ; ಅವನಲ್ಲಿ ಕ್ರಾಂತಿ ಎಬ್ಬಿಸಿದ ಮೂಲ ಮಂತ್ರ!

"ತಮ್ಮಯ್ಯ! ಷರಟು ಬಿಚ್ಚಿ ಬಿಸಾಕೋ'' ಅಂದೆ. ಇದೇ ಆ ಮಂತ್ರ. ....ಸರ್ಕಾರದವರು ವಿದ್ಯಾವಂತರನ್ನೂ, ಪದವೀದರರನ್ನೂ ಹಳ್ಳಿಗಳಿಗೆ ಕಳುಹಿಸಿ ಅವರಿಗೆ ಹೊಲ ಗದ್ದೆಗಳನ್ನು ರಿಯಾಯಿತಿಯಿಂದ ಕೊಟ್ಟು ಅವರಿಂದ ವ್ಯವಸಾಯ ಮಾಡಿಸಿ ನಿರುದ್ಯೋಗ ಸಮಸ್ಯೆಯನ್ನು ಪರಿಹರಿಸಬೇಕೆಂದು ಯೋಚಿಸುತ್ತಿರುವರಲ್ಲಾ. ಈ ಪ್ರಯತ್ನವು ಸಫಲವಾಗಬೇಕಾದರೆ, ಪದವೀಧರರು ಸಂತೋಷದಿಂದ ಹಳ್ಳಿಗಳ ಕಡೆ ನುಗ್ಗಬೇಕು! ಅಳುಮೋರೆಯಿಂದ ವಿಧಿಯಿಲ್ಲದೆ, ತಮ್ಮ ಹಣೆಬರಹವನ್ನು ಶಾಪಿಸುತ್ತಾ ಹೋಗಿ ಪ್ರಯೋಜನವಿಲ್ಲ. ಇದಕ್ಕೆ, ಅವರಲ್ಲಿ ಒಂದು ಮಾನಸಿಕ ಪುನರ್ರಚನೆ ಆಗಬೇಕು. ನಗರಜೀವನದ ಸೊಬಗನ್ನು ವರ್ಣನೆ ಮಾಡಿ ನಾವು ಅವರನ್ನು ನಗರಗಳಿಗೆ ಎಳೆದು ತಂದದ್ದಾಯಿತು. ಈಗ ಹಳ್ಳಿಗಳ ಸೌಖ್ಯವನ್ನು ವಿವರಿಸಿ ಅವರನ್ನು ಮತ್ತೆ ಹಿಂದಕ್ಕೆ ಕಳುಹಿಸಬೇಕಾಗಿದೆ

ನಮ್ಮ ಶಾಲೆಗಳಲ್ಲೂ ಕಾಲೇಜುಗಳಲ್ಲೂ ಹಳ್ಳಿಯ ಹಾಡುಗಳನ್ನೇ ಹೇಳಿಸಬೇಕು. ವರ್ಡ್ಸ್‌ವರ್ತ್‌ಲ್ಲದೆ ಬೇರೊಬ್ಬ ಆಂಗ್ಲ ಕವಿಯ ಮಾತನ್ನೂ ಎತ್ತಬಾರದು. ಹಳ್ಳ ಕೊಳ್ಳ, ಕೆರೆ ನೆರೆ, ಮರ ಬಳ್ಳಿ, ಹಕ್ಕಿ ಹಾವು ಇವುಗಳ ಮೇಲೆ ಪದ್ಯ ಬರೆಸಬೇಕು. ಮೋಟಾರ್ ಕಾರುಗಳ ಭೂಂಕಾರಕ್ಕಿಂತ ನಾಯಿಗಳ ಬೊಗಳುವಿಕೆಯೇ ಸಾವಿರ ಪಾಲು ಲೇಸು, ಕಾರ್ಖಾನೆಗಳ ಸಿಳ್ಳಿಗಿಂತ ಗಾರ್ದಭಗಳ ಗಾನವೇ ಇಂಪು ಎಂಬ ವಿಷಯಗಳ ಮೇಲೆ ಪ್ರಬಂಧಗಳನ್ನು ಬರೆಸಿ ಉತ್ತಮವಾದವುಗಳಿಗೆ ಪಾರಿತೋಷಿಕಗಳನ್ನು ಹಂಚಬೇಕು. ಕೋಗಿಲೆ, ಕಾಗೆ, ಕೋಳಿ, ಗೂಬೆ ಇವುಗಳ ಕೂಗನ್ನನುಸರಿಸುವಂತೆ ಪ್ರೋತ್ಸಾಹಿಸಬೇಕು. ಹಳ್ಳಿಗರ ಆಟಗಳೇ ಮೇಲು, ಅದೇ ಆರೋಗ್ಯಕರ ಎಂದು ಸಲ ಸಲಕ್ಕೂ ಹೇಳುತ್ತಿರಬೇಕು. ಆಯುರ್ವೇದದಲ್ಲಿ ಆಯ ಹೆಚ್ಚು; ವ್ಯಯ ಕಡಿಮೆ ಎಂದು ಅವರು ಮನಗಾಣಲಿ. ಬೆಳಗ್ಗೆಯೂ ಸಂಜೆಯೂ ವ್ಯವಸಾಯಕ್ಕೆ ಸಂಬಂಧಿಸಿದ ಗಾದೆಗಳನ್ನೇ ಗೀತೆಯಂತೆ ಅವರು ಪಠಿಸಲಿ. ಭರ್ತೃಹರಿಯ ವೈರಾಗ್ಯ ಶತಕವನ್ನೂ ಗಟ್ಟಿಮಾಡಿದರೆ ಒಳ್ಳೇದು. ಕಾಫಿಯಿಂದಾಗುವ ನೂರು ಕೆಡಕುಗಳು, ನೆಕ್‌ಟೈಗೂ, ಯಕೃತ್ ರೋಗಗಳಿಗೂ ಇರುವ ಸಂಬಂಧ—ಇವೇ ಮುಂತಾದ ವಿಷಯಗಳನ್ನು ಕುರಿತು ಉಪನ್ಯಾಸ ಮಾಡಲಿ. ಮುಖ್ಯವಾಗಿ, ಷರಟು ಬಿಚ್ಚಿ ಬಿಸಾಕಿ, ದುಪ್ಪಟಿ ಹೊದ್ದು ತಿರುಗಾಡಲಿ.

ನಮ್ಮ ವಿಶ್ವವಿದ್ಯಾನಿಲಯದ ಪದವೀಧರರ ಕೈಯಲ್ಲಿ ಷರಟು ಬಿಚ್ಚಿಸುವುದು ಆಗದ ಕೆಲಸ. ಕಿವಿ ಬೇಕಾದರೂ ಕತ್ತರಿಸಿ, ಷರಟು ಬಿಚ್ಚುವುದಿಲ್ಲ, ಅಂತ ಅವರು ಹಠ ಹಿಡಿಯುತ್ತಾರೆ. "ಊಟಕ್ಕೆ ಏಳಿ" ಅಂದ ಕೂಡಲೇ, "ಷರಟು ಇರಬಹುದು ತಾನೆ!" ಅಂತ ಅವರು ಅಂಗಲಾಚಿ ಹಲ್ಲು ಕಿರಿಯುತ್ತಾರೆ. "ಬಿಚ್ಚಿಬಿಡಿ, ಅಪ್ಪಾ! ನಮ್ಮ ಅಜ್ಜ ಇದಾರೆ" ಅಂತ ನೀವು ಹೇಳಿದರೆ, ಆಸಾಮಿ ಹಿತ್ತಲ ಬಾಗಿಲಿಂದ ಪರಾರಿ! ಷರಟು ಬಿಚ್ಚಿಕೊಂಡು ಅರಗಳಿಗೆ ಒಂದು ಕಡೆ ಕುಳಿತುಕೊಳ್ಳೋದು ಅಂದರೆ, ಈ ಗಂಡಸರಿಗೆ ಭಯ, ನಾಚಿಕೆ, ಅವಮಾನ!

ಷರಟು ಅಂದರೆ, ನಮ್ಮ ಹುಡುಗರಿಗೆ ವಿದ್ಯೆಯ ಗುರುತು; ಹೆಣ್ಣು ಮಕ್ಕಳಿಗೆ ಮಿಲ್‌ಸಾರಿ ಇದ್ದ ಹಾಗೆ. ಅಥವಾ ಡಿಪ್ಟಿಕಮಿಷನರಿಗೆ ದಫೇದಾರರು ಇದ್ದಹಾಗೆ. ಆತ ಹತ್ತಿರ ಇಲ್ಲದೆಹೋದರೆ, ಅವರೂ ಒಬ್ಬ ಸಾಮಾನ್ಯ ವ್ಯಕ್ತಿ, ಎಲ್ಲರಂತೆ! ಹಾಗೆಯೇ, ಷರಟು ಇಲ್ಲದೆ ಇದ್ದರೆ ಗ್ರಾಮಸ್ಥ, ಇದ್ದರೆ ಗ್ರಾಜುಯೇಟ್! ಷರಟು ಧರಿಸದೆ ಇರುವ ಒಬ್ಬರನ್ನ ನಿಮ್ಮೆದುರಿಗೆ ನಿಲ್ಲಿಸಿ, "ಈತ ಎಂ. ಎ." ಅಂತ ಹೇಳಿದರೆ, ನೀವು ಖಂಡಿತವಾಗಿಯೂ ನಂಬುವುದಿಲ್ಲ. "ಹೌದ್ರಿ! ಎಂ. ಎ. ರೀ" ಅಂತ ಅವರು ಒತ್ತಿ ಹೇಳಿದರೆ, ನೀವು "ಓ! ಸಂಸ್ಕೃತ ಎಂ. ಎ. ನೋ?" ಅಂತೀರಿ, ಯಾಕೆ? ಎಂ. ಎ. ಆದರೂ ನಮ್ಮ ದೇಶದ ಸನಾತನ ಸಂಸ್ಕಾರ ಉಳಿದಿದೆ ಆತನಲ್ಲಿ, ಅಂತ.

ಆದ್ದರಿಂದ, ಷರಟು ಬಿಸಾಕಿದರೆ, ಸನಾತನ ಸರಳ ಸಂಸ್ಕೃತಿ; ಷರಟು ಹಾಕಿದರೆ, ಷಹರಿನ ಷೋಕಿ ಸಂಸ್ಕೃತಿ. ಎರಡನೆಯದಲ್ಲಿನ ಸುಖಕ್ಕಿಂತ ಮೊದಲನೆಯದಲ್ಲಿನ ದುಃಖವೇ ವಾಸಿ!

—ಎಸ್. ವೀ. ವೀ. ಕೃತಂ.

ದಕ್ಷಿಣದ ಸುಂದರಿ

ಮೂಗು ದಾಣಗಳೇಕೆ?
ನಿನ್ನ ಪತಿ ಬಿಗಿಹಿಡಿದು ಆಳಲೆಂದೊ.
ಕಿವಿಗಳಿಗೆ ಕಲ್ಲೇಕೆ?
ಕಲಹಕಾದರೆ ಕಿವಿ ಹರಿಯಲೆಂದೊ.
ಬುಟ್ಟಿ ಹೂವೇಕೆ ತುರುಬಿನಲಿ
ಗಿಡದಲ್ಲೇ ನಲಿಯುತಿರೆ ಕರುಬೋ.
    ತಟ್ಟೆಯೊಲು ಕುಂಕುಮವು
    ನೊಸಲಿನಲಿ ಹೆಣ್ಣು ನೀನೆಂದು ಸಾರಲಿಹುದು
    ಜಗಿಯುತಿಹೆ ಹಿಡಿ ಹಿಡಿಯ ತಂಬಲವ
    ಮೊದಲ ತುಟಿಗೆಂಪು ಸಾಲದಿಹುದೊ.
ಮೂರು ಹೆಣ್ಣುಡಬಹುದು ನಿನ್ನಗಾಥದ ಜರಿಯ ಸೀರೆಯನು
ಆರು ಆಡಿನ ಹಸಿವಿಂಗುವುದು ನೀ ಮೆದ್ದ ವೀಳ್ಯದೆಲೆಯಿಂದ
ನೂರು ಸೇರಿರಬಹುದೆ ಹೊನ್ನೊಡವೆ, ಎಂಟು ಮಣ ಹಗುರ ಮೈಯಮೇಲೆ
ಒಂದೇ ಗೇಣಿನ ಜಡೆಯು, ಹೆಗ್ಗಣದ ಪಾಲಾಯ್ತೊ ನೀಳಕೇಶ.
ಬಳಿದಿಹುದು ಕೆನ್ನೆಗಳಿಗರಿಸಿನವು, ಕೊಳ್ಳಲ್ಕೆ ಬೆಲೆ ತಗ್ಗು ಎಂದೊ.
ಅಬ್ಬಬ್ಬ ಸಾಕಾಯ್ತು, ಎಂಥರೂಪಸಿ ನೀನು,
                ದೂರದಿಂದಲೆ ನೂರು ನಮೋ ನಮೋ.

—ವಸುದೇವ ಭೂಪಾಲಂ.

ರಾಮ ಶಬ್ದ

ಮೊನ್ನೆ ನಾನೊಂದು ಕಥಾಕಾಲಕ್ಷೇಪವನ್ನು ಕೇಳುವ ಕುತೂಹಲದಿಂದ ದೇವಸ್ಥಾನಕ್ಕೆ ಹೋಗಿದ್ದೆ. ಹರಿದಾಸರು ಪೀಠಿಕಾ ಪ್ರಕರಣದಲ್ಲಿ ಹೇಳಿದ ಒಂದು ಶ್ಲೋಕ ನನ್ನ ಮನಸ್ಸನ್ನು ನಾಟಿತು. ನಾಟಿ ಹೃದಯವನ್ನೇ ಭೇದಿಸಿಕೊಂಡು ಹೊರಟುಹೋಯಿತು. ಆದ್ದರಿಂದ ಶ್ಲೋಕದ ನೆನಪಿಲ್ಲ; ಅದರ ಭಾವಾರ್ಥ ಮಾತ್ರ ಅಂತರಂಗದಲ್ಲಿ ಅಚ್ಚಳಿಯದೆ ನಿಂತಿದೆ. ಪೀಠಿಕೆಗೂ ಕಥೆಗೂ ಯಾವ ಸಂಬಂಧವೂ ಇರಬೇಕಾದ್ದಿಲ್ಲವಾದ್ದರಿಂದ, ಶಬರಶಂಕರ ವಿಲಾಸ ಎಂಬ ಹರಿಕಥೆಯ ಪೀಠಿಕೆಯಲ್ಲಿ ಅವರು ರಾಮನಾಮದ ಮಹತ್ವವನ್ನು ಮುಕ್ಕಾಲು ಗಂಟೆ ಕಾಲ ವಿವರಿಸಿದರು. ರಾ ಎಂದಾಗ ಒಳಗಿನ ಪಾಪರಾಶಿ ತೆರೆದ ಬಾಯಿಂದ ಹೊರಕ್ಕೆ ಪ್ರವಹಿಸುವುದೆಂದೂ ಮ ಎಂದಾಗ ಬಿಗಿದ ತುಟಿಗಳು ಆ ಪ್ರವಾಹವನ್ನು ಮತ್ತೆ ಒಳಕ್ಕೆ ಸೇರಿಸುವುದಿಲ್ಲವೆಂದೂ ಅವರು ವಾದಿಸಿದರು; ವಾದಿಸುವುದೇನು? ಸಾಧಿಸಿದರು ನನ್ನ ಸುತ್ತ ಹತ್ತಿಬಿಡಿಸುತ್ತಿದ್ದ ಪರಲೋಕಾತುರರಾದ ಮಹೀಗೂ ಇಳಿಗೂ ಬೇಡವಾದ ಮಹಿಳೆಯರು ಅವರ ಬಡಾಯಿಗೆ ಮರುಳಾಗಿ ರಾ-ಮ ರಾ-ಮ ಎಂದು ಹಲವು ಸಾರಿ ಅಂದು ನೋಡಿದರು. ರಾ ಅಂದಾಗ ಪಾಪಕ್ಕೆ ದಾರಿ, ಮ ಎಂದಾಗ ದಾರಿಗೆ ಅಡ್ಡ ಸಿದ್ಧವಾದದ್ದನ್ನು ಕಂಡು ಅವರಿಗೆ ಮಹದಾಶ್ಚರ್ಯವಾಯಿತು. ಸುಲಭದಲ್ಲೇ ಪಾಪ ದೂರವಾಗಲು ದಾರಿ ತೋರಿಸಿದ ಮಹಾತ್ಮರನ್ನು ಅವರು ವಂದಿಸಿದರು. ಆದರೆ, ನಾನು ಮಾತ್ರ ಆ ದಾಸರನ್ನು ಅಷ್ಟು ಬೇಗ ಅನುಮೋದಿಸಲಿಲ್ಲ. ಅಲ್ಲಿಂದ ಮುಂದಕ್ಕೆ ನಾನು ಶಬರ ಶಂಕರರಿಗೆ ಗಮನವೇ ಕೊಡಲಿಲ್ಲ. ಪಾಪ ಎಂಬುದು ಉಸಿರೇ? ವಿಷಗಾಳಿಯೇ? ಬಾಯಿಂದ ಅದನ್ನ ಉಗುಳಲು ಸಾಧ್ಯವೇ? ಬಾಯಿ ಮುಚ್ಚಿ ಕುಳಿತರೆ ಪಾಪ ಒಳನುಗ್ಗಲರಿಯದೆ? ಇಂತಹ ತಂತ್ರೋಪಾಯಗಳಿಂದ ಜನರನ್ನು ಮರುಳು ಮಾಡಬಹುದೆ? ನಿಜಾಂಶವನ್ನು ಧೈರ್ಯವಾಗಿ ನಿಸ್ಸಂಕೋಚವಾಗಿ ಘಂಟಾಘೋಷವಾಗಿ ತಿಳಿಸಿದರೆ ಪ್ರಮಾದವಾದೀತೆ? ಸ್ತ್ರೀಯರಿಗೆ ಈ ಮಟ್ಟದ ಬೋಧನೆ, ಇತರಾದಿಗಳಿಗೆ ಈ ಮಟ್ಟದ ಬೋಧನೆ ಎಂದು ಜಿಪುಣರಂತೆ ಜ್ಞಾನ ಭಂಡಾರವನ್ನು ವಿತರಣ ಮಾಡಲು ಅಂಜುವುದೇತಕೆ? ಇವೇ ಮುಂತಾದ ಯೋಚನೆಗಳಲ್ಲಿ ನನ್ನ ಮನಸ್ಸು ಹುಚ್ಚು ಹೊಳೆಯಾಗಿ ಹರಿಯಿತು.

ಆದರೆ, ಥಟಕ್ಕನೆ ನನ್ನ ಹುಚ್ಚಿಗೆ ನಾನೇ ಲಗಾಮು ಹಾಕಿ, ಹಿಡಿದೆಳೆದು ಹದಕ್ಕೆ ತಂದು ಕಟ್ಟಿ ನಿಲ್ಲಿಸಿದೆ. ಆದರೆ, ಅದು ಗೂಟವನ್ನೂ ಕಿತ್ತೋಡಿತು. ಪಾಪ ಎಂಬುದು ಬಾಯಿ ತೆರೆದಾಗ ಹೊರಬಿದ್ದು ಮುಚ್ಚಿದಾಗ ಒಳನುಗ್ಗಲು ಅಶಕ್ತವಾದ ಪದಾರ್ಥವಾದರೆ, ರಾಮ ಪದಕ್ಕಿಂತ ಭಾಮ ಉತ್ತಮವೆಂದು ನನಗೆ ತೋರಿತು. ಭಾ ಎಂದಾಗ ರಾ ಎಂಬುದಕ್ಕಿಂತ ಹೆಚ್ಚು ವಿಷಗಾಳಿಯನ್ನು ಹೊರ

ನೂಕಬಹುದಲ್ಲವೆ? ಮ ಅಂತೂ ಇದ್ದೇ ಇದೆ. ಜೊತೆಗೆ ಸತ್ಯ ಎಂಬುದನ್ನೂ ಸೇರಿಸಿಕೊಂಡರೆ, ಸತ್ಯಸ್ವರೂಪನಾದ ಪರಮಾತ್ಮನನ್ನೂ ಧ್ಯಾನಮಾಡಿದ ಹಾಗಾಯಿತು. ಭಾ ಅಂದಾಗ ಪಾಪ ಭೂತವು ಭಯಭೀತಿಗಳಿಂದ ಭರ್ಜರೀಕೃತವಾಗಿ ಭಗ್ನಾಭೀಷ್ಟವಾಗಿ ಭಜಕಳ ಅಂತರಾಳದಿಂದ ಪರಾರಿಯಾಗುತ್ತದೆ. ಮ ಅಂದರೆ, ಮುಚ್ಚಳ ಸಿದ್ಧ. ಆದ್ದರಿಂದ, "ಸತ್ಯಭಾಮಾ" ಎಂಬ ನಾಮದ ಉಚ್ಚಾರಣೆಯೇ ಶ್ರೇಷ್ಠ ಎಂದೆನಿಸಿತು. ಜೊತೆಗೆ, ಶ್ರೀಕೃಷ್ಣನ ಪ್ರಿಯ ಪತ್ನಿ. ನನ್ನಂತೆಯೇ ಸ್ತ್ರೀ. ಆದ್ದರಿಂದ, ಗಂಡುಲೋಕ ರಾಮನಾಮದಿಂದ ಪಾಪ ದೂರವಾದರೆ, ನಾವು ಹೆಂಗಸರು ಸತ್ಯಭಾಮೆಯ ನಾಮೋಚ್ಚಾರಣದಿಂದಲೇ ಅವರಿಗಿಂತ ಶೀಘ್ರವಾಗಿ ಅದೇ ಕೆಲಸವನ್ನು ಸಾಧಿಸಬಹುದೆಂದು ಯೋಚನೆ ಮಾಡಿದೆ. ಆದರೆ, ಆ ಕೂಡಲೇ ನನ್ನ ಮನಸ್ಸಿಗೆ ಮತ್ತೊಂದು ಭಯವಾಯಿತು. ಕಥಾಕಾಲಕ್ಷೇಪ ಕೇಳುವುದಕ್ಕೆ ಅಂತ ಬಂದವಳು, ಶಬರನೆಲ್ಲೋ ಶಂಕರನೆಲ್ಲೋ ನನ್ನದೇ ಒಂದು ದಾರಿ ಹಿಡಿದುಬಿಟ್ಟೆನಲ್ಲಾ ಅಂತ ವ್ಯಸನವಾಯಿತು. "ರಾಮ, ರಾಮಾ!" ಎಂದು ಹೇಳುತ್ತಾ, ದಾಸರ ಮಾತಿಗೆ ಕಿವಿಕೊಟ್ಟೆ.

—ಶ್ರೀಮತಿ ಮೀನಾಬಾಯಿ.

ಭಾವನಿಗೊಂದು ಉತ್ತರ

ಶ್ರೀಮಾನ್ ಭಾವನವರಿಗೆ—

ನಿಮ್ಮ ಕೈಂಡ್ ಕಾಗದ ಕೈ ಸೇರಿದಾಗ್ಯೂ ಉತ್ತರವಾಗಿ ನಾಲ್ಕು ಗೆರೆಗಳನ್ನು ಗೀಚಿ ಹಾಕಲು ಇಷ್ಟು ತಡಮಾಡಿದ್ದಕ್ಕಾಗಿ ದಯವಿಟ್ಟು ಮನ್ನಿಸಬೇಕು. ಇವತ್ತು ಬೆಳಗ್ಗೆ ಎದ್ದೊಡನೆಯೆ ನಿಮ್ಮ ಕಾರ್ಡನ್ನು ನೋಡಿದೆ. ಸರಿ! ಘಳಿಗೆ ಚೆನ್ನಾಗಿಲ್ಲ ಅಂದುಕೊಂಡೆ. ಅದಕ್ಕೆ ಅನುಗುಣವಾಗಿ ನಮ್ಮ ತಾಯಿಯವರು ನಾನು ಕಾಫಿ ಕುಡಿಯುತ್ತಿದ್ದಾಗ ಮಾತು ಹೊರಳಿಸಿದರು, "ಕಾಗದ ಬರೆದೆಯಾ? ರಾಜಿಗೆ?" ಅಂತ! 'ಇವತ್ತು ಬರೆಯುತ್ತೇನೆ' ಎಂದೆ. ಈಗಾಗಲೇ ಇದೇ ರೀತಿ ಎಂಟು ಬಾರಿ ಬಿಟ್ಟಿದ್ದೆ. ರೇಗಿತು ಅವರಿಗೆ, ನಾನು ಸುಸ್ತಾಗುವ ಹಾಗೆ ದಬಾಯಿಸಿದರು. ನಾನು ದಿವಾನಗಿರಿ ಮಾಡುತ್ತಿಲ್ಲವೆಂಬ ಅಂಶವನ್ನು ತಿಳಿಸಿದರು. ನನ್ನ ಮೈಗಳ್ಳತನ ಮನೆಯವರ ಮೇಲಿನ ಅಸಡ್ಡೆ, ಪೋಲಿ ತಿರುಗುವಿಕೆ, ಸೋಮಾರಿಗಳ ಸಹವಾಸ ಎಲ್ಲವನ್ನೂ ಸಾಲಾಗಿ ಮತ್ತೊಮ್ಮೆ ಮೆರವಣಿಗೆ ಮಾಡಿಸಿದರು. ಬಟ್ಟಲನ್ನು ಕೆಳಗಿಟ್ಟು ಮುಖದ ಬೆವರೊರಸಿಕೊಂಡು ಮೆಲ್ಲನೆದ್ದೆ.

ನಮ್ಮ ಕಾಲೇಜು ೧೧-೩೦ಕ್ಕೆ. ೧೧ಕ್ಕೆ ಊಟಕ್ಕೆ ಕುಳಿತೆ. ನಮ್ಮ ತಂದೆಯವರೂ ಜೊತೆಯಲ್ಲಿದ್ದರು. "ಮಾತು ಈ ಮಾತು ಆಡುತ್ತಾ ಅವರು ನಿಮ್ಮ ಕಾರ್ಡಿನ ಪ್ರಸ್ತಾಪವನ್ನೇ ಎತ್ತಿ, ಅದಕ್ಕೆ ನಾನು ಉತ್ತರ ಬರೆಯದೆ ಇದ್ದುದಕ್ಕಾಗಿ ಸೆಕೆಂಡ್ ಫ್ರಂಟ್ ಸ್ಥಾಪನೆ ಮಾಡಿದರು. "ನನಗೆ ಟೈಮಿಲ್ಲ; ನೀನೇ ಬರೆಯೋ ಬೇಗ ಇದಕ್ಕೆ ಉತ್ತರ" ಅಂತ ಅವರು ಹೇಳಿದ್ದನ್ನು ಮರೆವು ನುಂಗಿತ್ತು. ಊಟ ಮಾಡಿದಾಗ ಸಿಕ್ಕಿದ ದಬಾವಣೆಯಿಂದ ಇನ್ನು ಮೇಲೆ ಕಾಗದ ಬಂದ ದಿನವೇ ಉತ್ತರ ಬರೆದು ಮರುಟಪಾಲಿಗೇ ಸಾಗಿಸಬೇಕೆಂಬ ನಿರ್ಧರಕ್ಕೆ ಬಂದೆ. ಕಾಲೇಜಿನಲ್ಲೆಲ್ಲ ೧೨ ರಿಂದ ೪-೩೦ ರ ವರೆಗೆ ನಿಮಗೆ ಉತ್ತರ ಬರೆದು ಟಪಾಲ್ ಡಬ್ಬದ ಬಾಯಿಗೆ ತುರುಕುವ ಯೋಚನೆಯೇ ನನಗೆ.

೫ ಗಂಟೆಯ ಹೊತ್ತಿಗೆ ಹೊಟ್ಟೆಯಲ್ಲಿದ್ದುದೆಲ್ಲ ಕರಗಿದ್ದುದರಿಂದ ಮಂದಗಮನನಾಗಿ (ಮನೆಯನ್ನೇ ನುಂಗಬೇಕೆಂಬ ಆತುರವಿದ್ದರೂ) ಮನೆಯ ಬಳಿ ಬರುತ್ತಿದ್ದೆ. ಎಡಮುಗ್ಗುಲಿನ ತಿರುವನ್ನು ತಿರುವಿದೊಡನೆಯೇ, ಟ್ರಿಕ್ಸಿ ಆಡುತ್ತಿದ್ದ ಮೂರ್ತಿ ಓಡೋಡಿ ಬಂದ. ಆಶ್ಚರ್ಯದ ಸುದ್ದಿಯಿದ್ದರೆ ಹಾಗೆ ಓಡಿ ಬರುವುದು ಅವನ ವಾಡಿಕೆ. "ಓಹೋ! ಯಾರೋ ಮನೆಗೆ ಬಂದಿದ್ದಾರೆ!" ಎಂದುಕೊಂಡೆ. "ಏನೋ?" ಎಂದೆ "ರಾಜಿ ಕಾಗದ ಬಂದಿದೆ" ಅಂತ ಬಾಯಿಬಿಟ್ಟ! ಮನೆಯೊಳಗೆ ಹೋಗಿ, ಸದ್ದು ಮಾಡದೆ, ಅಂಗಿ ಬಿಚ್ಚಿಟ್ಟು, ಕುಳಿತು, ಕಾಗದ ತೆಗೆದು ಓದಿದೆ. ಮೊದಲಿಂದ ತುದಿಯವರೆಗೂ ಅದೊಂದು ದೊಡ್ಡ ಚಾರ್ಜ್ ಷೀಟು ಬೇಜಾರು, ಬೇಡಿಕೆ, ಬೆದರಿಕೆ ಇವೆಲ್ಲ ಆ ಕಾಗದದಿಂದ ಹೊರಟು ನನ್ನ ಕಣ್ಣ ಮುಂದೆ ಹರಿದಾಡಿದುವು. ಅದರಲ್ಲಿ ಕಾಗದ ಬರೆಯಲಿಲ್ಲವೆಂಬ ಕಂಪ್ಲೈಂಟು ಕಾಳ್ಗಿಚ್ಚಿನಂತೆ ಕೆದರಿಕೊಂಡಿತ್ತು. "ಕರಿವರದಾ!" ಎಂದು ಕೊಂಡು ಕಳ್ಳಹೆಜ್ಜೆಯ ಮೇಲೆ ಅಡಿಗೆ ಮನೆ ಹೊಸಲನ್ನು ಹಾದು, ಬಚ್ಚಲು ಮನೆಗೆ ಹೋದೆ. ಕಾಫಿ ಕುಡಿಯಲು ಅಡಿಗೆ ಮನೆಯೊಳಕ್ಕೆ ಕಾಲಿಡಲಿಲ್ಲ. ಕಾರಣ ಗೊತ್ತುತಾನೆ?

ಅಷ್ಟು ಹೊತ್ತಿಗಾಗಲೇ ೫-೩೦. ಕಾಲೇಜಲ್ಲಿ ಯಾರದೋ ಭಾಷಣ, ಆರು ಗಂಟೆಗೆ! ಸರಿ, ಅಲ್ಲಿಗೆ ಮತ್ತೆ ಸವಾರಿ ಚಿತ್ತೈಸಿತು ಮೊದಲಿಂದ ಕಡೆಯವರೆಗೂ ಕುಳಿತಿದ್ದು ಹೊರಬಿದ್ದೆ. ಭಾಷಣ ಬಹಳ ಚೆನ್ನಾಗಿತ್ತು ಎಂದುದು ಎಲ್ಲೆಲ್ಲೂ ಕೇಳುತ್ತಿತ್ತು. ನನಗೇನೂ ಅಷ್ಟು ಹಿತವಾಗಿರಲಿಲ್ಲ. ಬರೀ ಪುನರುಕ್ತಿ ಹೇಳಿದ್ದನ್ನೇ ಹೇಳುತ್ತಿದ್ದರು ಅವರು. ಒಂದೇ ಒಂದು ವಿಷಯವನ್ನು ಅವರು ಪದೇ ಪದೇ ಕೂಗಿ ಆಡುತ್ತಿದ್ದರು. "ನೀನು ಏಕೆ ನಿನಗೆ ಬರೆದ ಕಾಗದಗಳಿಗೆ ಉತ್ತರ ಕೊಡುತ್ತಿಲ್ಲ? ನಿನ್ನ ಭಾವ ಕಾರ್ಡು ಬರೆದು ಎಷ್ಟು ದಿನವಾಯಿತು? ನಿನ್ನ ತಂಗಿಗೆ ನೀನು ಉತ್ತರ ಬರಿ! ಇಷ್ಟು ದಿನ ಏಕೆ ಸುಮ್ಮನೆ ಕುಳಿತೆ? ಕಾಗದ........ಬರಿ.........ಬರಿ.........ಉತ್ತರ.........ಭಾವ..........ತಂಗಿ..........ಉತ್ತರ........"

ಕಾಲೇಜಿನಿಂದ ಕಾಲ್ಕಾಡಿ ಬಿಟ್ಟೆ. ದಾರಿಯಲ್ಲೊಬ್ಬ ಸ್ನೇಹಿತ, "ಏನೋ ಇದು? ನಿನ್ನಷ್ಟಕ್ಕೆ ನೀನೇ ಮಾತನಾಡುತ್ತ ಹೊರಟೆ? ವ್ಯಾಕ್‌ಬೆತ್ತಿನಲ್ಲಿ ಬರುತ್ತಲ್ಲಾ, ನಿದ್ದೆಯಲ್ಲಿ ನಡಿಯೋ ಸೀನು? ಅಭ್ಯಾಸ ಮಾಡುತ್ತಿದೀಯಾ?" ಅಂದ ....ಎಚ್ಚೆತ್ತೆ.

ಹತ್ತು ಹೆಜ್ಜೆ ಮುಂದಕ್ಕೆ ಹೋದಾಗ, ನಿಮ್ಮ ಆಫೀಸಿಗೆ ಈಚೆಗೆ ವರ್ಗವಾಗಿ ಇಲ್ಲಿಂದ ಬಂದಿರುವ ಸುಬ್ರಾಯರ ತಾಯಿ, ಮಗಳು, ಇಬ್ಬರೂ ಎದುರಿಗೆ ಸಿಕ್ಕಿದರು. ಪರಿಚಯದ ಚಿಹ್ನೆಯಾಗಿ ಸಣ್ಣದೊಂದು ನಗುವನ್ನು ಬೀರುವ ಮೊದಲೇ, ಅವರ ಮಗಳು, "ಏನ್ರಿ? ನೀವು ಕಾಗದವೇ ಬರೆದಿಲ್ಲವಂತೆ ನಿಮ್ಮ ತಂಗಿಗೆ? ನಿಮ್ಮ ತಂಗಿ ನಮಗೆ ಬರೆದಿದಾರೆ, ಕಂಡರೆ ಹೇಳು ಅಂತ" ಅಂದಳು. ಸುಬ್ರಾಯರ ತಾಯಿ ಆ ಮಾತಿಗೆ ದನಿಗೂಡಿಸಿದರು. "ಏನೋ ಇದು? ನಮ್ಮ ಮನೆಯಿಂದ ಈ ಮಗು ವಾರಕ್ಕೆರಡು ಕಾಗದ ತಪ್ಪದೆ ಬರೆಯುತ್ತಿದೆ. ನೀನೂ ಬರೆಯಬಾರದೇನೋ ನಿನ್ನ ತಂಗಿಗೆ? ಎಂದರು.

ಇಂದಿನಷ್ಟು ಎಂದೂ ಸುಸ್ತಾಗಿರಲಿಲ್ಲ. ಧರೆಗಟ್ಟಿ ಬೆವರು ಹರಿಯಿತು. ಅವರಿಬ್ಬರಿಗೂ ಭರವಸೆಕೊಟ್ಟು ರೂಮಿಗೆ ಬಂದೆ. ಕೋಟನ್ನು ಬಿಚ್ಚಿದೆ. ಕುರ್ಚಿಯಲ್ಲಿ ಕುಳಿತು, ಪೆನ್ನು ಕಳಚಿ, ಎರಡು ಹಾಳೆ ಕಾಗದ ಹರಿದು, ಬಲಗಡೆ ಮೂಲೆಯಲ್ಲಿ 'ಬೆಂಗಳೂರು' ಎಂದು ಬರೆದೆ.


ಅರ್ಧ ಕಾವು ಇಳಿಯಿತು. ನನ್ನಲ್ಲಿ ನನಗೇ ನೆಚ್ಚು ಹುಟ್ಟಿತು........ಆದಾಗಿ, ಉಭಯ ಕುಶಲೋಪರಿ ಸಾಂಪ್ರತ. ನಾವೆಲ್ಲರೂ ಇಲ್ಲಿ ಆರೋಗ್ಯವಾಗಿದ್ದೇವೆ. ನಿಮ್ಮ ಆರೋಗ್ಯಕ್ಕೆ ಆಗಾಗ ಕಾಗದ ಬರೆಯುವುದು. ಇನ್ನೇನೂ ವಿಶೇಷವಿಲ್ಲ.

ಇತಿ,

ರಂಗನಾಥ.

"ಈ ಊರಿನ ಜನಗಳಿಗೆ ಸಿನಿಮಾ ಇಲ್ಲದೆ ಬಹಳ ಅನಾನುಕೂಲವಾಗಿತ್ತು. ಸದ್ಯದಲ್ಲೇ ಟೂರಿಂಗ್ ಟಾಕೀಸ್ ಒಂದು ಬರುವ ಸಂಭವವಿದೆಯಾದ್ದರಿಂದ ಜನರು ಹರ್ಷಗೊಂಡಿದ್ದಾರೆ". (ಬಾತ್ಮಿದಾರರ ಸುದ್ದಿ)

ಟೂರಿಂಗ್ ಟಾಕೀಸ್‌ನ ಅರಚಾಟವಿಲ್ಲದಿದ್ದರೆ ಅನೇಕರಿಗೆ ಮನೆಗಳಲ್ಲಿ ನಿದ್ದೆಯೇ ಬರುವುದಿಲ್ಲವೆಂಬುದನ್ನು ನಾವೂ ಬಲ್ಲೆವು.



ಜ ಹ ನಾ ರ

ಜಹನಾರ—ಐದು ಗತಿಗಳನ್ನೊಳಗೊಂಡ ನೀಳ್ಗವನ: ಸರಳ ರಗಳೆ: ಗತಿಕಾಣಿಸಿದವರು: ಶೃಂಗೇರಿ ವಿದ್ಯಾರಣ್ಯ ಪುರ ಪರಮೇಶ್ವರ ಭಟ್ಟ, ಎಂ. ಎ. ಕನ್ನಡ ಉಪನ್ಯಾಸಕರು, ಇಂಟರ್‌ಮೀಡಿಯೆಟ್ ಕಾಲೇಜ್, ಭದ್ರಾವತಿ ದಾರಿ, ಶಿವಮೊಗ್ಗ.

ಔರಂಗಜೇಬನ ತಂಗಿ ಜಹನಾರಳು ಕ್ಷಾತ್ರ ದೀಪಸ್ತಂಭವೆನಿಸಿದ ಒಬ್ಬ ರಜಪೂತ ಪುಂಗವನನ್ನು ತನ್ನ ರಕ್ಷಾ ಬಂಧಿಯಾಗಿ ವರಿಸಿದ್ದು, ಆತ "ಹೆಣ್ಣಿನೊಲುಮೆಯೆ ನಮಗೆ ಸರ್ವ ಪ್ರಾಣಾಧಾರ, ನೀನೇ ಬಾಳಿನ ಗಂಗೆ! ನೀನೇ ಪ್ರೇಮದ ತುಂಗೆ, ನಿನ್ನ ತುಟಿ ಮುದ್ದಿಡುವ ಮುಖದ ತೆರೆಯರಿವೆಯಲಿ ಒಂದೆಳೆಯ ನೆಳೆದೆನ್ನ ಕೈಗೆ ಕಂಕಣ ಕಟ್ಟು" ಎಂದು ಹಾತೊರೆದದ್ದು, ಕಡೆಗೆ "ನಾ ಮುಂದೆ ಹೋದರೂ ಕಾಯುವೆಂ ನಿನಗಾಗಿ" ಎಂಬ ಪ್ರೇಮ ಮಂತ್ರವಪಠಿಸಿ ರಣರಂಗದಲ್ಲಿ ಔರಂಗಜೇಬನೊಂದಿಗೆ ಕಾದು, ಮುಂದೆ ಹೋದದ್ದು, ಜಹನಾರಳನ್ನು ಅಣ್ಣನು ಕಾರಾಗೃಹದಲ್ಲಿರಿಸಿದ್ದು, ಕಡೆಗೆ ಆಕೆ 'ತನಗೆ ತಾನೇ ರಕ್ಷೆ' ಎಂದು ಮನಗಂಡು ಮಂಗಳ ಶ್ಲೋಕ ಹಾಡಿದ್ದು ಇದೇ ಕಥಾ ಸರಣಿ ೨೪ನೆಯ ಪಂಕ್ತಿಯಲ್ಲೇ "ಮುಂದೇನ ಪೇಳುವೆಂ?" ಎಂದು ಅನುಮಾನಿಸುತ್ತಾ ಕವಿ ಕಂಗಾಲಾದರೂ ಕೂಡ, ಅವರ ಕಾವ್ಯಲತೆ ಅಲ್ಲಿಂದ ಮುಂದಕ್ಕೂ ೮೩೦ ಪಂಕ್ತಿಗಳ ವರೆಗೂ "ದಾಂಗುಡಿಯಿಟ್ಟು ಹಸುರು ಹಂದರವಾಗಿ, ಹೂವಾಗಿ, ಹಣ್ಣಾಗಿ ನೆರಳಿನಾ ಸರೆಯಾಗಿ" ಹಬ್ಬಿದೆ. ೧೯೪೩ರಲ್ಲಿ ತಯಾರಾದ ಕವನವಾದರೂ ಕೂಡ

ಇವರಲ್ಲಿ ರಸಋುಷಿ, ಅರಿಸಂಚಿ, ಅಸ್ತ ಗಿರಿ, ಭೂಗೋಳಮಂ ಬಳಸುವ ಸೂರ್ಯ ದೇವಂ, ಕುಂತಳ ದುಂಬಿ, ಪುರುಷಜನ್ಮಿ ಕಡಲು ಬತ್ತಿದಾಗ ಕಣ್ಗೆ ಕಾಣಿಸುವ ಹಳದಿ ಮರಳು ಗಾಡುಗಳು, ಲಾಂಗೂಲವುನೆತ್ತಿ ಧ್ವಜದ ವೋಲಾಡಿಸುವ ಪುರುಷ ಸಿಂಹಂ, ಚಂಡ ಭೈರವ, ಆಕಾಶ ಮಂಟಪಂ, ಜೇನಿಂಚರಂ, ಭೂಲೋಕದಲ್ಲಿ ನೆಟ್ಟ ಪಾರಿಜಾತಂ, ಸಹಸ್ರ ದಳ ಪದ್ಮಂ, ಪೆಡಂಭೂತಂ ಮುಂತಾದ ಚಿರಪರಿಚಿತವಾದ ಕವಿತಾ ಸಾಮಗ್ರಿಗಳೆಲ್ಲವನ್ನೂ ಕವಿ ಉಪಯೋಗಿಸಿಕೊಂಡಿದಾರೆ. ಅಲ್ಲದೆ, ಕವಿತೆಯ ಹಳಮೆಗೆ ಆದರಲ್ಲಿನ ಸೊನ್ನೆಗಳ ಮಾಲೆಯೇ ಸೊಬಗನ್ನು ಬೀರಿದೆ. ಪುಟಕ್ಕೆ ಸರಾಸರಿ ೪೩ ರಂತೆಯೂ ಪಂಕ್ತಿಗೆ ಸರಾಸರಿ ೧೬೩೩ರಂತೆಯೂ ಸೊನ್ನೆಗಳನ್ನು ಸೇರಿಸಿರುವುದರಿಂದ ಕವನದ ಬಹುಭಾಗವನ್ನು ಬಾಯಿಮುಚ್ಚಿಕೊಂಡೇ ಪಠಿಸಬೇಕಾಗಿರುವುದರಿಂದ ಸೋಜಿಗದ ಸಂಗತಿ! ಮತ್ತೊಂದು ವಿಶೇಷವೇನೆಂದರೆ, ಪುನರುಕ್ತ್ಯಾಲಂಕಾರದ ಪುನಃ ಪುನಃ ಪ್ರಯೋಗ ಸಾಮಾನ್ಯವಾಗಿ ಪ್ರಚಾರದಲ್ಲಿರುವ ಶತ ಶತ ಸಹಸ್ರ, ಥಳಥಳನೆ, ಮುಂತಾದುವಲ್ಲದೆ, ತೆರೆತೆರೆಯಾಗಿ, ನೆನೆನೆನೆದು, ಮಿನಮಿನ ಮಿನುಗಿ ಬಿದಬಿದನೆ ಬೆಂದು, ಬೀಸಿ ಬಿಸಿಬಿಸಿಯಾಗಿ, ಬೆಚ್ಚ ಬೆಚ್ಚನೆ, ಹೇಳಹೇಳುತೆ ನಾನು, ಹಿರಿ ಹಿರಿ ಹಿಗ್ಗಿ, ಸುಳಿ ಸುಳಿಗೂಡಿ, ನುಡಿನುಡಿಗೆ ಜೇನಿಟ್ಟು, ತೆರೆತೆರೆಯಾಗಿ ಮುಂತಾದುವುಗಳನ್ನೂ ಕವಿ ಹೊಸಹೊಸ ಹೊಸೆದು ಕವನಕ್ಕೆ ಮೆರುಗು ಕೊಟ್ಟಿದ್ದಾರೆ. ಮುನ್ನುಡಿಯಲ್ಲಿ ರಂ. ಶ್ರೀ. ಮುಗಳಿಯವರು ಬರೆದಿರುವಂತೆ, "ಇದರ ಗತಿಗತಿಯಲ್ಲಿ ಇಂದಿನ ಧ್ವನಿಯೊಂದು ನುಡಿಯುತ್ತದೆ". "ಕವಿಗೆ ಬಿಡಿಬಿಡಿಸಿ ಬಣ್ಣಿಸುವ ಕೈವಾಡವಿದೆ".

ಪ್ರಸಂಗತ್ವೇನ ಹಲಕೆಲವು ಮುಖ್ಯ ಸಮಸ್ಯೆಗಳಿಗೆ ಕವಿ ಈ ನೀಳ್ಗವನದಲ್ಲಿ ಉತ್ತರ ಕೊಟ್ಟಿದ್ದಾರೆ. (೧) ಸಾಮಾನ್ಯವಾಗಿ ನಮ್ಮ ಮನೆಗಳಲ್ಲಿ ಎಣ್ಣೆ ದೀಪಗಳು ಆರಿಹೋಗಲು ಐದು ಮುಖ್ಯ ಕಾರಣಗಳು: ಗತಿ ೫ ಪಂಕ್ತಿ ೬೩ ರಿಂದ ೭೧೮ ವರೆಗೆ ಓದಿ. (೨) 'ನಡೆ ಮುಂದೆ ನಡೆ ಮುಂದೆ, ನುಗ್ಗಿ ನಡೆ ಮುಂದೆ' ಎಂದು ಶ್ರೀಮಾನ್ ಕೆ.ವಿ. ಪುಟ್ಟಪ್ಪನವರು ಉದ್ಗಾರ ತೆಗೆದಿರುವುದರ ಗೂಢಾರ್ಥ: ಗತಿ ೨ ಪಂಕ್ತಿ ೧೪೦ನ್ನು ಓದಿ. ಎಲ್ಲರೂ ಅಡಿಯ ಮುಂದಿಡುತ ನಡೆದರೆ, ಜಟಕ ಗಾಡಿ ಕುದುರೆಗಳಿಗಾಗುವ ಸುಯೋಗವನ್ನು ತಿಳಿಯಿರಿ. (೩) ರಾಜಂ, ಪುಷ್ಪಂ ಶೀತಳಂ, ವಸಂತ ಕೋಕಿಲಂ ಮುಂತಾದ 'ಅಂ'ಕಾರಾಂತ ಸ್ತ್ರೀಲಿಂಗ ನಾಮಧೇಯಗಳುಳ್ಳ ಪತ್ನೀ ಪ್ರೇಯಸಿಯರನ್ನು ಹೇಗೆ ಸಂಬೋಧಿಸಿದರೊಳ್ಳಿತು? ಗತಿ ೨ ಪಂಕ್ತಿ ೧೧೩ನ್ನು ಓದಿ; ಹಾಗೆಯೇ, ಗತಿ ೩ ಪಂಕ್ತಿ ೧೬೧ನ್ನೂ ಓದಿ; ಆ ಮೇಲೆ, ಕರೆಯಿರಿ. (೪) "ಕೊರವಂಜಿ"ಯ ಮುಖ್ಯ ಉದ್ದೇಶವೇನು? ಗತಿ ೧ ಪಂಕ್ತಿ ೧೨೫ನ್ನು ಓದಿ

ಗ್ರಂಥದ ಬೆಲೆ ಒಂದು ರೂಪಾಯಿ ಎಂದು ಅಚ್ಚುಹಾಕಿದೆಯಾದರೂ ಹನ್ನೆರಡೇ ಆಣೆ. ಎಂಟಾಣೆಗೂ ಬೇರೆ ಬೈಂಡಿನ ಪ್ರತಿ ಕೊಡುತ್ತಾರೆ.

—ಪಾಟೀಳ.

---o---

ಗುಮಾಸ್ತೆ ಲಾವಣಿ

ಕಳ್ಳಪಿಳ್ಳಿ ಮಾತಲ್ಲ ಒಳ್ಳೊಳ್ಳೆ ಜನಗಳು ।
ದೊರಿಯಂತದರದ ಬಿಟ್ಟು ಚಾಕ್ರಿ ಸೇರ್ತಾರೆ ॥
ಬೆಳಗು ಮುಂಜಾನೆದ್ದು ಮಿಂದು ತಳಮಳ ಮಾಡಿ ಭಾಳ ।
ಸಿಂಬಿ ಸುತ್ತಿ ಸೈಕಲ್ ಹತ್ತಿ ರಕ್ತ ಕಾರ್ತಾರೆ ॥
ಕಾಲೇಜಲ್ಲಿ ಓದಿದ್ದೊಂದು ಬೇಳೆಕಾಳು ಬೇಯೋದಿಲ್ಲ ।
ಎಸ್ಸಾರ್ ಎಸ್ಸಾರ್ ಅನ್ನದೇ ಇದ್ರೆ ಬಕ್ರ ಅಂತಾರೆ ॥
ಕುಂಡ್ರಲಾಕೆ ಕುರ್ಚಿಕೊಟ್ಟು ಮೇಜ ಮೇಲೆ ಫೈಲನ್ನಿಟ್ಟು ।
ತಿರುವಿ ತಿರುವಿ ಹಾಕ್ತಾ ಸುಂನೆ ಕುಕ್ಕರಿಸಿರ್ತಾರೆ ॥
ಭಾತಿ ಇದ್ರೆ ಹೆಡ್‌ಕ್ಲಾರ್ಕ್ ಹೋಗಿ ಸಾಹೇಬರ್ಗೆ ಹೇಳುತ್ತಾರೆ ।
ಇಲ್ಲದಿದ್ದರೆ ಕಿವೀ ತುಂಬ ಚಾಡಿ ತುಂಬ್ತಾರೆ ॥
ಕುಂತ ಮಂದಿಯೊಳಗೆ ಮಾನ ಹಾನಿಯಾದ್ರು ಚಿಂತಿ ಇಲ್ಲ ।
ಆಫೀಸ್‌ನಲ್ಲಿ ಕಾಸ್‌ಪೀಸ್ ಅಂತ ಸುಮ್ನನೆ ಇರ್ತಾರೆ ॥
ಷೋಕಿಲಾಲನಂತೆ ಸೂಟ ಪಾಕೀಜಾಗಿ ಹಾಕದೆ ಇದ್ರೆ ।
"ಮೇಕೆ" ಅಂತ ಚಿಕ್ಕಸಾಹೇಬ್ರು ನಕ್ಕುಬಿಡ್ತಾರೆ ॥
ಸಂಬಳಕ್ಕಿಂತ ಡಬ್ಬಲ್ ಬಂದ್ರು ಡಬ್ಬಣಸಾಲ ಆಕ್ಕಿ ತಿಂದ್ರು ।
ಸಾಲವಿಲ್ದೆ ಸಂಸಾರ್ ಮಾತ್ರ ಜರಗೋದೇ ಇಲ್ಲ ॥
ಮನೇಲಿರೋ ಮಡದಿ ಮಕ್ಕಳ್‌ಗೇನೂ ಎತ್ತ ತಿಳಿಯೋದಿಲ್ಲ ।
ಆಫೀಸ್ನಿಂದ ವಾಪಸ್ ಬಂದ್ರೆ ಪೂಜೇನೇ ದಿನಾ ॥
ವಾರಕ್ಕೆರಡು ಸಾರಿನಾದ್ರು ಸಿನಿಮಾ ನೋಡೋಕ್ ಹೋಗದೆ ಇದ್ರೆ ।
ಭಂಡ ಷಂಡ ಜಿಪುಣ ಅಂತ ಗರ್ಜನೆ ಮಾಡ್ತಾರೆ ॥
ಬಡ್ತಿ ಸಂಬ್ಳ ತುಟ್ಟಿಭತ್ಯ ಬೇಕು ಅಂತ ಗೊಣಗುಟ್ಟಿದ್ರೆ ।
ಗಲ್ತಾನೇನೇ ಕೊಡ್ತೇವಂತ ಹುಕುಂ ನೀಡ್ತಾರೆ ॥
ಹಿಂಗಿಲ್ಲಿಂಗೆ ಅಂತ ಒಮ್ಮೆ ಬಾಯಿಬಿಟ್ರೆ ಲಂಗ್ಣಗಾಮು ।
ಇಲ್ಲದ್ದೋಡ ಅಂತ ಹೇಳಿ ಜುನೀಸ್ ಹಾಕ್ತಾರೆ ॥
ಬಾಯಿ ಬುಡ್ದೆ ಕುಕ್ಸೆ ಬಿಗಿದು ರುಜು ಜಾಗ ತೋರ್ಸಿಕೊಟ್ರೆ ।
ಎಂಥಾ ಪೇಪ್ರೋ, ನಿಂತೆ ಸುಮ್ನೆ, ಬೊಗಳೋ ಅಂತಾರೆ ॥
ಕೊ ಆಪ್ರೇಟ ಸೊಸೈಟೇಲಿ ಕಂತು ಕಟ್ಟೋ ವಾಯಿದೆ ದಿನ ।
ಸ್ಪೆಷಲ್ಲಾಗಿ ಏನಾದ್ರೊಂದು ಕಮಿಷರ್ ಹೇಳ್ತಾರೆ ॥

ಹಬ್ಬಾ ಹುಣ್ಣಿಮಿ ನಿಬ್ಬಣದೊಳಗೆ ಹುಗ್ಗಿ ಹೋಳಿಗಿ ಉಣ್ಣುವಾಗ ।
ಹರಿಬರೀಲಿ ಜವಾನರನ್ನ ಮನೆಗೇ ಅಟ್ತಾರೆ ॥

ಗುಮಾಸ್ತೆಗಳ ಗೋಳನ್ನೆಲ್ಲ ಲಾವಣಿ ಬರೆದು ಪೋಸ್ಟ್ ಮಾಡಿದ್ರೆ ।
ಕಾಗ್ದ ಇಲ್ಲ ಅಚ್ಚಾಕೋಕೆ, ನಮಸ್ತೆ ಅಂತಾರೆ ॥

ಶಿವನೇ ನಮ್ನ ಕಾಪಾಡ್ಬೇಕು; ಲಾವಣಿ ಕೇಳಿ ಕುಣಿದಾಡ್ಬೇಕು ।
ಶಿವನೇ ನಮ್ನ ಕೈಲಾಸಕ್ಕೆ ಸಾಗಿಸ್ಕೋಬೇಕು ॥

—ಇಂದಾಗೆ ಈಶ್ವರಯ್ಯ.



ಮೈ ಮರೆತ ಮಾದ

ಎಲ್ಲರೂ ಜ್ಯೋತಿಷ್ಯ ಓದಿದರೆ.......

"ಕೇಫ"

ಮೊನ್ನೆ ನನ್ನ ಸಾಲದ ಬಟ್ಟೆ ಅಂಗಡಿಗೆ ಹೋಗಿ ಸ್ವಲ್ಪ ವ್ಯಾಪಾರ ಮಾಡೋಣ ಅಂತ ಹೊರಟೆ. ಆ ಬಟ್ಟೆ ಅಂಗಡಿಯ ಯಜಮಾನನಿಗೆ ನನ್ನಲ್ಲಿ ಬಹಳ ನಂಬಿಕೆ. ಎಷ್ಟೋ ಬಾರಿ ನೂರಾರು ರೂಪಾಯಿಗಳಷ್ಟು ನನ್ನ ಮೇಲಿಯೇ ಇರುತ್ತಿತ್ತು. ಆದರೆ, ಈ ಸಾರಿ ನಾನು ಹೋದಾಗ ವಿಚಿತ್ರವಾಗಿ ಆಡಿಬಿಟ್ಟ. ನಾನು ನಾಲಕ್ಕೈದು ರಖಂ ಸೀರೆಗಳನ್ನು select ಮಾಡಿ, "ಇದನ್ನು ಕಟ್ಟಿ Bill ಮಾಡಪ್ಪಾ" ಅಂತ ಹೇಳಿದೊಡನೆಯೇ ಅಂಗಡಿ ಯಜಮಾನ "ಸ್ವಾಮಿ, ನಿಮಗೆ ಇನ್ನು ಮೇಲೆ ಸಾಲ ಕೊಡುವುದಿಲ್ಲ. ನಗದು ಹಣ ಕಟ್ಟಿಬಿಟ್ಟು ನಿಮ್ಮ ಮಾಲು ತೆಗೆದುಕೊಂಡು ಹೋಗಿ" ಅಂದ. ನನಗೆ ತಕ್ಷಣವೇ ಪೆಚ್ಚುವೋರೆಯಾಯಿತು. ಅಲ್ಲಾ, ಒಂದು ತಿಂಗಳಿಂದ ನನಗೆ ಹೇಳಿ ಹೇಳಿ ಅವಳಿಗೂ ಬೇಜಾರಾಗುವ ಹೊತ್ತಿಗೆ ಒಂದು ಸುಮಾರಾದ ಸೀರೆ ತೆಗೆದುಕೊಂಡು ಹೋಗಿ ಕೊಡೋಣ ಅಂದ್ರೆ, ಅಂಗಡಿಯವನೇ ನನ್ನ ಶತೃ ಆಗೋಣೇ. ಏನೋ ಅವನಿಗೂ ಇತ್ತು—ಸ್ಥಾನಬಲ. ಆದರೂ ನನಗೆ ಕಾರಣ ಗೊತ್ತಾಗಲಿಲ್ಲ. "ಇದೇನು ಶೆಟ್ರೇ, ಹೀಗೆ ಮಾಡಿಬಿಟ್ರಿ" ಅಂತ ಕಲ್ಲನ್ನಾದರೂ ಕರಗಿಸುವ ಧ್ವನಿಯಲ್ಲಿ ಕೇಳಿದೆ. ಅದಕ್ಕವನು, "ಏನಿಲ್ಲ ಸ್ವಾಮಿ, ನೀವು ಇನ್ನು ಮೇಲೆ ಸಾಲ ತೀರಿಸಲಾರಿರಿ. ನಿಮಗೆ ಏಳರಾಟದ ಶನಿಕಾಟ ಶುರುವಾಗುತ್ತೆ. ಇನ್ನು ಏಳು ವರ್ಷ ನೀವು ಎಲ್ಲಾ ತರದ ಕಷ್ಟಗಳನ್ನೂ ಅನುಭವಿಸಬೇಕು. ಅವುಗಳ ಜೊತೆಗೆ ನನ್ನಲ್ಲಿ ಸಾಲದ ಭಾರ ಒಂದು ಬೇಡವೆಂದೇ ಹಾಗೆ ಮಾಡಿದೆ" ಅಂದ.

ನನಗೆ ಆಶ್ಚರ್ಯವಾಯಿತು. ಇದೇನು, ಅಂಗಡಿ ಸಾಹುಕಾರ್ರೆಲ್ಲಾ ಜಾತಕ ಫಲ ನೋಡುತ್ತಾರೆಯೇ ಅಂತ. "ಸ್ವಾಮಿ, ನನಗೂ ಜ್ಯೋತಿಷ್ಯ ಬರುತ್ತೆ. ನನ್ನ ಅಂಗಡಿಯಲ್ಲಿ ಲೆಖ್ಖವಿಡುವ ಎಲ್ಲರ ಜಾತಕಗಳೂ ನನ್ನ ಹತ್ತಿರವಿರುತ್ತವೆ" ಅಂದ ಘಾಟಿ ಸಾಹುಕಾರ.

ಅದು ಹೋಗಲಿ; ಆದದ್ದಾಯಿತು. ನಮ್ಮವಳ ಅದೃಷ್ಟ. ಎಷ್ಟೇ ಆಗಲಿ ಅವಳು ನನ್ನ ಅರ್ಧಾಂಗಿ. ಆದರೆ, ಈಗ ನನ್ನ ಹತ್ತಿರವಿರುವುದೇ ಅರ್ಧ ಅಂಗಿಯಾದ್ದರಿಂದ ನಾವಿಬ್ಬರೂ ಕಾಲಾಂಗ ಕಾಲಾಂಗಿಯರಾಗಿಯೇ ಇರುತ್ತೇವೆ—ಇನ್ನು ಏಳು ವರ್ಷ.

ಆದರೂ, ಈ ವಿಚಿತ್ರ ನೋಡಿದಿರಾ? ಹೀಗೇ ಯೋಚನೆ ಮಾಡಿದರೆ ಪ್ರಪಂಚದಲ್ಲಿ ಎಲ್ಲರೂ ಜ್ಯೋತಿಷ್ಯರಾಗಿಬಿಟ್ಟರೆ ಎಷ್ಟು ಚೆನ್ನಾಗಿರುತ್ತೆ. ಆಗ ಜನರೆಲ್ಲರೂ ಅವರವರ ಗ್ರಹ, ನಕ್ಷತ್ರಗಳ ವಚನದಲ್ಲಿಯೇ ಮಾತನಾಡಬಹುದು. ಒಬ್ಬರು

ತಮ್ಮ ಬುಧ ಮೇಷಕ್ಕೆ ಯಾವಾಗ ಬರುತ್ತಾನೆಂದು ಯೋಚಿಸುತ್ತಿದ್ದರೆ ಮತ್ತೊಬ್ಬರು ತಮ್ಮ ಮೆಧ ಮೇಷ ಯಾವಾಗ ಬಿಡುತ್ತಾನೆಂದು ಲೆಖ್ಖ ಹಾಕುತ್ತಿರಬಹುದು.

ನಾನೂ ನನ್ನ ಜಾತಕವನ್ನೇ ಸರಿಯಾಗಿ ಗಮನಿಸುತ್ತಾ, ಸಮಯ ನೋಡಿಕೊಂಡು ಒಬ್ಬ ಧನಿಕನ ಹತ್ತಿರ ಹೋಗಿ "ನೋಡಿ ಯಜಮಾನರೇ, ಇನ್ನು ಎರಡು ತಿಂಗಳಿಗೆ ನನ್ನ ಧನಾಧಿಪತಿಯು ನನ್ನ ಜನ್ಮಸ್ಥಾನಕ್ಕೆ ಬರುತ್ತಾನೆ. ಆಗ ನನಗೆ ಅನಿರೀಕ್ಷಿತ ದ್ರವ್ಯ ಸಿಗುತ್ತದೆ. ಆದ್ದರಿಂದ ನೀವು ಸದ್ಯಕ್ಕೆ ನನಗೊಂದು ಸಾವಿರ ರೂಪಾಯಿ ಕೊಡಿ. ನಿಮಗೆ ಸಾವಿರಕ್ಕೆ ಸಾವಿರ ಹಾಕಿ ವಾಪಸ್ ಕೊಡುತ್ತೇನೆ" ಅಂತ ಕೇಳಿದರೆ ಕಾರ್ಯವು ಫಲಿಸುವುದರಲ್ಲಿ ಸಂಶಯವೇ ಇಲ್ಲ. ಅದರಲ್ಲೂ ಆ ಧನಿಕನಿಗೆ ಅವನ ಜಾತಕದ ಪ್ರಕಾರ ಧನಾಧಿಪತಿಯು ಶನಿ ಸಂಬಂಧನಾಗಿ ರಾಹು ದೃಷ್ಟಿ ಪೀಡಿತನಾಗಿ ಶತೃವಿನ ಮನೆಯಲ್ಲಿ ಕೂತಿದ್ದರೆ ನನ್ನ ರೊಟ್ಟಿ ತುಪ್ಪದಲ್ಲೇ—ತುಪ್ಪ ಸಿಕ್ಕಿದರೆ.

ಎಷ್ಟು ಚೆನ್ನಾಗಿರುತ್ತದೆ ಅಂಥಾ ಕಾಲ! ನಾವು ಒಬ್ಬರನ್ನು ಪ್ರೀತಿಸಬೇಕಾಗಿಲ್ಲ, ಒಬ್ಬರನ್ನು ದ್ವೇಷಿಸಬೇಕಾಗಿಲ್ಲ, ಒಬ್ಬನಿಗೆ ಸಹಾಯ ಮಾಡಬೇಕಾಗಿಲ್ಲ, ಒಬ್ಬನ ಮೇಲೆ ಕರುಣೆ ತೋರಿಸಬೇಕಾಗಿಲ್ಲ. ಏಕೆ, ಸಂತೋಷಪಡುವುದೂ, ದುಃಖಪಡುವುದೂ ಅವರವರ ಜಾತಕ ಫಲತಾನೇ? ಮಸಲ, ಒಬ್ಬನು ಭಾವಿಯಲ್ಲಿ ಬಿದ್ದ ಅಂತ ಇಟ್ಟುಕೊಳ್ಳೋಣ. ಆ ಪಾಪಿಯನ್ನು ನಾವೇಕೆ ಎತ್ತಬೇಕು ಮೇಲಕ್ಕೆ? ಅವನಿಗೆ ಆಯಸ್ಸು ಚೆನ್ನಾಗಿದ್ದರೆ ಹೇಗಾದರೂ ಬದುಕುತ್ತಾನೆ. ಇಲ್ಲದಿದ್ದರೆ ನಾವು ಮೇಲಕ್ಕೆತ್ತಿತಾನೇ ಏನು ಪ್ರಯೋಜನ? ಭಾವೀ ನೀರು ಕೆಟ್ಟು ಹೋದೀತು ಅಂತ ತಾನೇ. ಮುನಿಸಿಪಾಲಿಟಿ ಇರೋದೇಕೆ ಮತ್ತೆ?

ಹೀಗೇ ಯೋಚಿಸುತ್ತಾ ಹೋದರೆ ಇನ್ನೂ ವಿಚಿತ್ರವಾಗಿರುತ್ತೆ. ನಿಮಗೇನಾನಾದರೂ ಖಾಯಿಲೆ ಬಂದು ಒಬ್ಬ ಡಾಕ್ಟರ್ ಹತ್ತಿರ ಹೋದರೆ ಆತ "ಓಹೋ ನಿಮಗೆ ಖಾಯಿಲೇನೋ? ನಿಮ್ಮ ಜಾತಕ ತಂದಿದ್ದೀರೇನ್ರೀ? ನಿಮ್ಮ ಆಯಸ್ಸು ಎಷ್ಟಿದೆ ಅಂತ ನೋಡಿ, ಪ್ರಯೋಜನವಿದ್ದರೆ ಕೈಹಾಕುತ್ತೇನೆ." ಅಂತ ಹೇಳಿಬಿಟ್ರೇ ನಿಮಗೆಷ್ಟು ಸಂತೋಷ! ಸುಮ್ಮನೆ ನಿಮಗೆ ಭರವಸೆ ಕೊಟ್ಟು ದುಡ್ಡೂ ಕಸುಕೊಂಡು ಕೊನೆಗೆ ಚಿತೀ ಮೇಲೆ ಏರಿಸುವುದಕ್ಕಿಂತ ಎಷ್ಟೋವಾಸಿ. ಅಥವಾ ನಿಮ್ಮನ್ನು ನೋಡಿದ ಕೂಡಲೆ "ಸ್ವಾಮಿ, ನನ್ನ ಹತ್ತಿರ ಏಕೆ ಬರುತ್ತೀರ. ನನಗೆ ಈ ವರ್ಷ ಕುಜನು ವಕ್ರನಾಗಿ ವ್ಯಯ ಸ್ಥಾನದಲ್ಲಿದ್ದಾನೆ. ನಾನು ಮುಟ್ಟಿದ case ಎಲ್ಲಾ ದಕ್ಷಿಣಾಭಿಮುಖವೇ. ಆದ್ದರಿಂದ ಇನ್ನೆಲ್ಲಾದರೂ ಹೋಗಿ" ಅಂತ ಕಡಾ ಖಂಡಿತ ಹೇಳಿಬಿಟ್ರೆ ಎಷ್ಟು ನೆಮ್ಮದಿ?

ಅಷ್ಟು ದೂರ ಏಕೆ ಹೋಗಬೇಕು. ಈಗ ನಮ್ಮೂರಲ್ಲಿ ರೇಷನ್ ಆಫೀಸರಗಳದ್ದೂ, ಸೊಸೈಟಿಗಳ ಗುಮಾಸ್ತರುಗಳದ್ದೂ ಜಾತಕಗಳು ನೋಡಿ. ಅವರಿಗೆ ಧಾನ್ಯಾಧಿಪತಿಯು ಕುಂಭದಲ್ಲಿ ಸೇರಿಕೊಂಡು ಈ ಯುದ್ಧಕಾಲದಲ್ಲೂ ಮೂಗಿನ

ತನಕ ಹೊಟ್ಟೆ ತುಂಬಿಸುತ್ತಾನೆ. ಆದರೆ, ಇದೆಲ್ಲಾ ಹೇಳಿದ ಮೇಲೆ ನೀವಂದು ಕೊಳ್ಳಬಹುದು. ಸುಳ್ಳು ಜಾತಕ ಬರೆಯಿಸಿ ಜನಗಳಿಗೆ ಟೋಪಿ ಹಾಕಬಹುದು ಅಂತ. ಹಾಗೆಲ್ಲಾ ಜ್ಯೋತಿಷ್ಕರನ್ನೆಲ್ಲಾ ಮರಳುಮಾಡುವುದಕ್ಕಾಗದು—ಒಂದು ವೇಳೆ ನೀವು ಗಂಡಾಗಿದ್ದು, ಒಂದು ಹೆಣ್ಣು ಜಾತಕ ತೋರಿಸಿದಿರೀ ಅಂದ್ರೆ ನಿಮ್ಮ ಗುಟ್ಟೆಲ್ಲಾ ರಟ್ಟಾಯಿತು. ಮತ್ತೆ ಕೆಲವರು, ಇದೇನಿದು ಒಂದು bomb ಬಿದ್ದರೆ ಮನೆಯಲ್ಲಿದ್ದವರೆಲ್ಲಾ ಏಕೆ ಸಾಯುತ್ತಾರೇಂತ. ಆದರೆ, bombನಲ್ಲಿ ಒಂದು ವಿಚಿತ್ರವಿದೆ. ಆ bomb ತಯಾರಾದ ಘಳಿಗೆ ನೀವು—ಸಾಯದೇ ಇದ್ದಲ್ಲಿ ವಿಚಾರಿಸಿ, ಆಗ ನಿಮಗೇ ತಿಳಿಯುತ್ತೆ.

ಹೀಗೆ ಹೇಳುತ್ತಾ ಹೋದರೆ ಮುಗಿಯುವುದೇ ಇಲ್ಲ ಜ್ಯೋತಿಷ್ಯದ ಪ್ರಭಾವ. ಆದರೆ, ನಾವು ನಮ್ಮ ಸಮಾಜದಲ್ಲಿ ಅದಕ್ಕೆ ಕೊಡಬೇಕಾದ ಪ್ರಾಮುಖ್ಯತೆ ಕೊಟ್ಟಿಲ್ಲ. ಹೀಗಾಗಿ ನಮ್ಮ ಭಾರತದ ಹಿಂದಿನ ಕಾಲದ ಈ ಮಹಾ ವಿದ್ಯೆಯು ಹಾಳಾಗುತ್ತಿದೆ. ನನ್ನ ಸಲಹೆಯನ್ನು ಕೇಳುವುದಾದರೆ, ಈಗಿರುವ ವಿದ್ಯಾಭ್ಯಾಸ ಶಿಕ್ಷಣದಲ್ಲಿ ಜ್ಯೋತಿಷ್ಯ ಶಾಸ್ತ್ರವೊಂದು ಸೇರಿಸಲೇಬೇಕು. ಅದು ಫಲಿಸಿದರೆ ಕಾಲ ಕ್ರಮೇಣ ಸರಕಾರಕ್ಕೆ ಎಷ್ಟೋ ಉಳಿತಾಯವಾಗುತ್ತೆ. ಹೇಗೆಂದರೆ, ಎಲ್ಲರಿಗೂ ಜ್ಯೋತಿಷ್ಯ ನೋಡುವುದು ಬಂದುಬಿಟ್ಟರೆ ಒಬ್ಬರ ಗುಟ್ಟು ಮತ್ತೊಬ್ಬರಿಗೆ ಚೆನ್ನಾಗಿ ತಿಳಿದು, ಈಗಿರುವ ಕೋರ್ಟು, ಕಚೇರಿ, ಆಸ್ಪತ್ರೆ ಮುಂತಾದ ಖರ್ಚಿನ ಇಲಾಖೆ ಗಳನ್ನೆಲ್ಲಾ ಮುಚ್ಚಬಹುದು. ಜನಗಳನ್ನು ಅವರವರ ಗ್ರಹಫಲಗಳಿಗೆ ಬಿಟ್ಟರೆ ಎಷ್ಟೋ ಸುಖವಾಗಿರುತ್ತದೆ. ನೀವೇ ಯೋಚಿಸಿ!

ಈಗಲೇ ಜ್ಯೋತಿಷ್ಯ ಕಲಿಯಬೇಕೆನ್ನುವವರು "ಕೇಫ" ರಚಿಸಿರುವ "ಜ್ಯೋತಿಷ್ಯಾನೃತಂ" ಎನ್ನುವ ಪುಸ್ತಕಕ್ಕೆ order ಮಾಡಬಹುದು.

"ಕೊರವಂಜೀ" ಸಂಪಾದಕರಲ್ಲಿ ವಿಜ್ಞಾಪನೆಗಳು:—

ತಾವು ತಮ್ಮ ಕೊರವಂಜೀ ಹುಟ್ಟಿದ ಘಳಿಗೆ ಫಲ ವಿಚಾರಮಾಡಿದ್ದೀರೆಂದು ನಂಬಿದ್ದೇನೆ. ದಯವಿಟ್ಟು ನನಗೆ ಕೊರವಂಜಿಯ ನಕ್ಷತ್ರ ಕಳುಹಿಸಿದರೆ, ಅದರ ಫಲವನ್ನು ನೋಡಿ, ಇನ್ನು ಮೇಲೆ ನಾನು ಬರೆದು ಕಳುಹಿಸುವ ಲೇಖನಗಳ ಘಳಿಗೆಯನ್ನು ಹೊಂದಿಸುತ್ತೇನೆ. ಮತ್ತೊಂದು ವಿಷಯವೇನೆಂದರೆ, ಈ ನಿಮ್ಮ ಮಾಸ ಪತ್ರಿಕೆಯಲ್ಲಿ ಪ್ರತಿ ವಾರವೂ ನನಗೆ ಸ್ವಲ್ಪ ಜಾಗ ಕೊಟ್ಟರೆ, ವಾರ ಭವಿಷ್ಯ ವನ್ನು ಬರೆದು ತಮ್ಮ ಓದುಗರಿಗೆ ಸಂಶಯ ನಿವಾರಣೆ ಮಾಡುತ್ತೇನೆ.

ಇಂತಿ

ಕೇಫ.

❖ ಗುರು ಶಿಷ್ಯ ❖

[ಶಾಲಾ ವಾರ್ಷಿಕೋತ್ಸವದ ದಿನ ಇನ್ಸ್‌ಪೆಕ್ಟರ್ ಸಾಹೇಬರವರ ಭಾಷಣಕಾಲದಲ್ಲಿ ಚಪ್ಪಾಳೆಗಳ ತೂಗುಯ್ಯಾಲೆ !!]

ಮಹನೀಯರೇ! ನಾನೂ ನಿಮ್ಮಂತೆಯೇ ಒಬ್ಬ ಉಪಾಧ್ಯಾಯ ಎಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತೇನೆ. (ಮೇಷ್ಟರುಗಳ ಚಪ್ಪಾಳೆ) ಆದರೆ ನಾನು ಇನ್ನೂ ನಿಮ್ಮೆಲ್ಲನೇಕರ ಹಾಗೆ ಹುಡುಗತನವನ್ನು ಕಳೆದುಕೊಂಡಿಲ್ಲ. (ಹುಡುಗರ ಚಪ್ಪಾಳೆ) ಹುಡುಗರೆಂದರೆ ಹಲ್ಲು ಕೀಳದ ಹಾವುಗಳು (ಮೇಷ್ಟರ ಚಪ್ಪಾಳೆ) ಎಂಬ ಭಾವನೆ ಶುದ್ಧ ತಪ್ಪು. (ಹುಡುಗರ ಚಪ್ಪಾಳೆ) ಉಪಾಧ್ಯಾಯನು ಹಾವಾಡಿಗನೂ ಅಲ್ಲ; ಕುರುಬನೂ ಅಲ್ಲ (ಮೇಷ್ಟರ ಚಪ್ಪಾಳೆ) ಅಂದರೆ, ಅವನು ಕೋಲುಗಾರನೂ ಅಲ್ಲ. (ಹುಡುಗರ ಚಪ್ಪಾಳೆ) ದಂಡಂ ದಶಗುಣಂ ಭವೇತ್ ಎಂಬ ಆರ್ಯೋಕ್ತಿ (ಮೇಷ್ಟರ ಚಪ್ಪಾಳೆ) ಆಧುನಿಕ ಬಾಲಕರಿಗೆ ಅನ್ವಯಿಸುವುದಿಲ್ಲ. (ಹುಡುಗರ ಚಪ್ಪಾಳೆ) ಇದ್ದ ಕ್ಕಿದ್ದಹಾಗೆ ಯಾರೂ ಬೃಹಸ್ಪತಿಗಳಾಗುವುದಿಲ್ಲವೆಂಬುದನ್ನು ನಾನೂ ಒಪ್ಪುತ್ತೇನೆ. (ಮೇಷ್ಟರ ಚಪ್ಪಾಳೆ) ಉಪಾಧ್ಯಾಯರೂ ಕೂಡ ಬೃಹಸ್ಪತಿಗಳಾಗಿ ಹುಟ್ಟಲಿಲ್ಲ. (ಹುಡುಗರ ಚಪ್ಪಾಳೆ) ಹುಡುಗರೂ ಅಷ್ಟೆ (ಮೇಷ್ಟರ ಚಪ್ಪಾಳೆ) ಆದರೆ, ಬೆತ್ತ ದಿಂದ ಬಡಿದು ಬಡಿದು ಬೃಹಸ್ಪತಿಗಳನ್ನು ತಯಾರುಮಾಡಲು ಸಾಧ್ಯವಿಲ್ಲ (ಹುಡು ಗರ ಚಪ್ಪಾಳೆ) ಅಂದ ಮಾತ್ರಕ್ಕೆ ಯಾವ ಉಪಾಧ್ಯಾಯನೂ ಕೂಡ ಸುಮ್ಮನೆ ಕೈಕಟ್ಟಿಕೊಂಡು ಕೂಡಕೂಡದು (ಮೇಷ್ಟರ ಚಪ್ಪಾಳೆ) ಬೆತ್ತಕ್ಕೆ ಬದಲಾಗಿ ಅವರು ಪ್ರೀತಿಯನ್ನೇ ಬಳಸಬೇಕು (ಹುಡುಗರ ಚಪ್ಪಾಳೆ) ಪ್ರೀತಿ ಅಂದರೆ ಭೀತಿ ಮಿಶ್ರ ವಾದ ಪ್ರೀತಿ! (ಮೇಷ್ಟರುಗಳ ಚಪ್ಪಾಳೆ) ಭೀತಿ ಅಂದರೆ, ನೀತಿಯನ್ನರಿತ ಭೀತಿ! (ಹುಡುಗರ ಚಪ್ಪಾಳೆ). ವಿದ್ಯಾರ್ಥಿಗಳೂ ಕೂಡ ವಿನೀತರಾಗಿ (ಮೇಷ್ಟರ ಚಪ್ಪಾಳೆ) ಹೇಡಿತನವನ್ನು ತೊರೆದು (ಹುಡುಗರ ಚಪ್ಪಾಳೆ) ವಿಧೇಯರಾಗಿ (ಮೇಷ್ಟರ ಚಪ್ಪಾಳೆ) ಕೇವಲ ಪುಸ್ತಕದ ಹುಳಗಳಂತಾಗದೆ (ಹುಡುಗರ ಚಪ್ಪಾಳೆ) ಭಯ ಭಕ್ತಿಗಳಿಂದ (ಮೇಷ್ಟರ ಚಪ್ಪಾಳೆ) ಸುಖ (ಹುಡುಗರ ಚಪ್ಪಾಳೆ) ದುಃಖ (ಮೇಷ್ಟರ ಚಪ್ಪಾಳೆ) ಗಳೆರಡನ್ನೂ, ಜಯ (ಹುಡುಗರ ಚಪ್ಪಾಳೆ) ಅಪಜಯ (ಮೇಷ್ಟರ ಚಪ್ಪಾಳೆ) ಗಳೆರಡರಲ್ಲೂ,........(ಇತ್ಯಾದಿ.... .. ಮುಂದುವರಿಯಿತು).

—ನಾ. ಕಸ್ತೂರಿ.

ಡಾ|| ಕ್ವಿಟ್

(ಏಕಾಂಕ ಪ್ರಹಸನ)

[ಅಡಿಕೆ ಮಂಡಿ ಗುಂಡಪ್ಪನವರು ಕೈಯಲ್ಲೊಂದು ಕಾಗದವನ್ನು ಹಿಡಿದುಕೊಂಡು ಗಡಬಡನೆ ಓಡಿಬಂದು, ಅಲ್ಲೇ ಕುಳಿತು ಲೆಕ್ಕಬರೆಯುವ ನಂಜಪ್ಪ ಗುಮಾಸ್ತೆಯನ್ನು ಕರೆಯುವರು.]

ಗುಂಡಪ್ಪ—(ಆತುರ ಆತುರವಾಗಿ) ನಂಜಪ್ಪ! ನಂಜಪ್ಪ! ಶನಿವಾರ ಅಂದರೆ ನೋಡು...... ಸಿದ್ಧ! ನಮ್ಮ ಕಿಟ್ಟೂ ಕಾಗದ.........ಅವನು ಸೀಮೆಗೆ ಹೋಗಿ ನಾಲ್ಕೂವರೆ ವರ್ಷವಾಯಿತಲ್ಲಾ........ಇದುವರೆಗೂ ಒಂದು ವಾರ ಕೂಡ ತಪ್ಪಿಲ್ಲ. ಪೋಸ್ಟು........

ನಂಜಪ್ಪ—(ಎದ್ದು, ಹತ್ತಿರಬಂದು) ಮತ್ತೆ, ತಿಂಗಳು ತಿಂಗಳು ಇಲ್ಲಿಂದ ೫೦೦ ೬೦೦ ರವಾನೆಯಾಗುವಾಗ, ಅಷ್ಟಾದರೂ ಮಾಡಬೇಡವೆ ಅವರು? ನ್ಯಾಯವೇ ಆಗಿದೆ........ಧರ್ಮವೇ ಆಗಿದೆ.

ಗುಂ—(ಹರಿದು ನೋಡುತ್ತಾ) ಅಯ್ಯೋ! ನನ್ನ ಹಾಳು ಎದೆಗೆ ಬೆಂಕಿಹಾಕ....

ನಂ—ಯಾಕೆ? ಏನಾಯಿತು? ಚಿಕ್ಕರಾಯರು ಆರೋಗ್ಯವಾಗಿದಾರೆ, ತಾನೆ?

ಗುಂ—ನಂಜಪ್ಪ! ಇದನ್ನ ನೀನೇ ಓದಬೇಕು.... ....ನನ್ನಿಂದಸಾಧ್ಯ (ಕೊಡುತ್ತಾ)

ನಂ—ಯಾಕೆ?

ಗುಂ—ಅಲ್ಲಾ, ಇದುವರೆಗೂ ಕನ್ನಡದಲ್ಲೇ ಗುಂಡುಗುಂಡಗೆ ಬರೆಯುತ್ತಿದ್ದವನು ಈಗ ಇಂಗ್ಲೀಷಿನಲ್ಲೇ ಬರೆದಿದಾನಲ್ಲಾ..........ಏನು ಬರೆದಿದಾನೆ, ಓದಿ ಹೇಳು........ನಂಜಪ್ಪ........

ನಂ—(ಕಾಗದವನ್ನು ಓದುತ್ತಾ) ಆಂ........ಓಹೋ.........ಹೂಂ........ಓ ....ಆಂ.........

ಗುಂ—ಏನೋ ಅದು? ಒದರಬಾರದೆ? ಸುಖವಾಗಿದಾನೆಯೋ?

ನಂ—(ಚಕಿತನಾಗಿ) ಅವರಿಗೆ ಪಾಸಾಯಿತಂತೆ.

ಗುಂ—(ಅಡ್ಡ ಬಂದು) ಐ. ಸಿ. ಎಸ್. ಆಯಿತೆ?

ನಂ—ಐ. ಸಿ. ಎಸ್ ಅಲ್ಲವಂತೆ......ಎಂ.ಎ.ಎಲ್‌ಎಲ್. ಡಿ., ಆಗಿದೆಯಂತೆ. ಅಂದರೆ, ಅದಕ್ಕಿಂತ ಇನ್ನೂ ಎರಡಕ್ಷರ ಹೆಚ್ಚು ಬಂದ ಹಾಗಾಯಿತು ಅಂತ ಬರೆದಿದಾರೆ.

ಗುಂ—ದುರ್ಗಾದೇವಿ! ನೀನೇ ಕಾಪಾಡಿದೆ. ಚಾಕರಿ ಸಿಕ್ಕಿತೋ? ಸಂಬಳ ಎಷ್ಟು? ೨೪೦೦೦ ರೂಪಾಯಿ ವೆಚ್ಚವಾಯಿತಲ್ಲಾ ......ಅದಷ್ಟನ್ನೂ ಎಷ್ಟು ವರ್ಷ ಗಳಲ್ಲಿ ತರುತ್ತಾನೆ ಮನೆಗೆ.

ನಂ—ಅದೇನೂ ಬರೆದಿಲ್ಲ........ಆದರೆ, ೫ ಸಾವಿರಕ್ಕೇನೂ ಮೋಸವಿಲ್ಲ, ಸ್ವಾಮಿ! ಬೊಂಬಾಯಿಗೆ ಬಂದಿಳಿಯುತ್ತಲೂ ಚಾಕರಿ ಸಿದ್ಧವಾಗಿರುತ್ತದೆ, ನನಗೆ ಗೊತ್ತಿದೆ. ಅವರೂ ಹಿಂದೆ ಬರೆದಿರಲಿಲ್ಲವೆ? ಈಗಲೂ ಈ ಕಾಗದದಲ್ಲೂ ಅದರ ಸೂಚನೆ ಇದೆ........

ಗುಂ—ಇದಿಷ್ಟನ್ನೂ ಕನ್ನಡದಲ್ಲಿ ಬರೆದಿದ್ದರಾಗುತ್ತಿತ್ತಲ್ಲ........

ನಂ—(ಥಟಕ್ಕನೆ) ಅಯ್ಯೋ! ಅಯ್ಯೋ! ಅದಾಗದು. ಎಂ. ಎ., ಎಲ್.ಎಲ್. ಡಿ., ಆದರೆ, ಮುಂದಕ್ಕೆ ಇಂಗ್ಲೀಷಿನಲ್ಲೇ ಸಕಲ ಸಂಸಾರಾನೂ ಜರುಗಿಸಬೇಕು. ಇವತ್ತು ಅವರು ಸಂಪೂರ್ಣ ವಿದ್ಯಾವಂತರಾದರು, ಅಂತ ನಾವು ಊಹಿಸುವುದಕ್ಕೆ ಇದೊಂದು ನಿದರ್ಶನ...........ಕನ್ನಡವನ್ನೇ ನಂಬಿ ಕುಳಿತರೆ ಕಡನ್ನವೇ ಗತಿ.

ಗುಂ—(ಸಮಾಧಾನ ಹೊಂದಿ) ಹಾಗೋ! ಹಾಗಾದರೆ, ಚಿಂತೆ ಇಲ್ಲ........ ನನಗೇನು ಗೊತ್ತು? ನಾನೊಬ್ಬ ಕನ್ನಡ ಗೊಡ್ಡು........

[ರಿಟೈರ್ಡ್ ಹೆಡ್ಮೇಷ್ಟು ರಾಮಯ್ಯಂಗಾರರ ಪ್ರವೇಶ]

ರಾ—ಏನು, ಗುಂಡಪ್ಪನವರೇ! ಕಿಟ್ಟು ಕಾಗದ ಬಂತೋ?

ಗುಂ—ಬರದೆ ಉಂಟೆ? ಬಂದಿದೆ........ಕಿಟ್ಟು ಪಾಸಾಗಿದಾನಂತೆ.

ರಾ—ಆಯಿತೋ, ಐ.ಸಿ.ಎಸ್ಸು.?

ಗುಂ—ಐ. ಸಿ. ಎಸ್ಸೇನು? ಉಡುಪಿ ಹೋಟ್ಲು ಮಾಣಿಗಳು ಮಾಡುತ್ತವಂತೆ ಅದನ್ನ!........ಇವನು ಬೇರೆ ಇನ್ನೇನೋ ಐದಕ್ಷರದ್ದು ಮಾಡಿದ್ದಾನೆ........ಅದಕ್ಕೆ ಐದು ಸಾವಿರ ಬರುತ್ತದಂತೆ ತಿಂಗಳಿಗೆ........ಯಾವುದದು ನಂಜಪ್ಪ!

ನಂ—ಎಂ. ಎ. ಎಲ್. ಎಲ್. ಡಿ.

ರಾ—ಗುಂಡಪ್ಪನವರೇ! ನಿಮ್ಮ ಜನ್ಮ ಸಾರ್ಥಕವಾಯಿತು.........ನನಗೆ ಇವತ್ತು ನಡೆದ ಹಾಗೆ ತೋರುತ್ತಾ ಇದೆ.......ನೀವು ಕಿಟ್ಟೂನ ಕೊಂಕುಳಲ್ಲಿ ಎತ್ತಿ

ಕೊಂಡು ಸ್ಕೂಲಿಗೆ ತಂದು ಬೆಂಚಿನ ತುದೀಲಿ ಕೂರಿಸಿದ್ದು, ಯಾವನೋ ಪೋಲಿ ಕಿಟ್ಟು ಜಡೇನ ಹಿಡಿದೆಳೆದಾಗ ಅವನು ಕೆಳಗೆ ಬಿದ್ದದ್ದು.........ಆ? ಅವತ್ತೇ ಅನ್ನಿಸಿತು ನನಗೆ! ಈ ಹುಡುಗನ ವಿದ್ಯಾಭ್ಯಾಸಕ್ಕೆ ನಮ್ಮ ದೇಶವೇ ಅಲ್ಲ ಅಂತ..... ಆ ಸ್ಫುರದ್ರೂಪು, ಆ ಮೇಧಾವೀ ಮೆದುಳು, ಆ ಕುಶಾಗ್ರ ಬುದ್ಧಿ....ತ್ಸ....ತ್ಸ.... ತ್ಸ ...ಅದೆಂಥಾದ್ದು ಕಿಟ್ಟು ಪಡೆದಿರುವ ಪರೀಕ್ಷೆ ಡಿಗ್ರಿ?

ನಂ—ಎಂ. ಎ. ಎಲ್. ಎಲ್. ಡಿ.

ರಾ—ಗುಂಡಪ್ಪನವರೇ! ನಮ್ಮೂರು ವಿದ್ಯೆ ಎಲ್ಲಾ ಎ. ಬಿ. ಎಂಬೋದನ್ನ ಬಿ. ಎ. ಅಂತ ತಲೆಕೆಳಕುಮಾಡಿದರೆ ಮುಗಿದುಹೋಯಿತು. ಅಥವಾ, ಎಮ್ಮೆ ಅಂತ ಅನ್ನಿಸಿಕೊಂಡರೆ ಮುಕ್ತಾಯ. ಅಲ್ಲಿ ನೋಡಿ, ಲಾಯರುಗಳ ಹಾಗೆ ಎಲ್.ಎಲ್.ಬಿ. ಅಲ್ಲ, ಎಲ್.ಎಲ್........?

ಗುಂ—ಡಿ.

ರಾ—ಹೂಂ! "ಡಿ!" ಎ. ಬಿ. ಸಿ. ಡಿ!.......ಅಬ್ಬಬ್ಬ! (ಖಿನ್ನವದನರಾಗಿ) ಆದರೆ, ನನ್ನ ಗ್ರಹಚಾರ! ನಾನೇ ಅ ಆ ಇ ಈ ಹೇಳಿಕೊಟ್ಟ ಬೃಹಸ್ಪತಿಯನ್ನ ಸಹಪಂಕ್ತಿಯಲ್ಲಿ ಕೂರಿಸಿಕೊಂಡು ಒಂದು ತುತ್ತು ಪುಳಿಯೋಗರ ತಿಂಬ ಭಾಗ್ಯ ನನಗೆ ಇಲ್ಲದೆ ಹೋಯಿತು........

ಗುಂ—(ಸಂತೈಸುತ್ತಾ) ಯಾಕೆ? ಅಗತ್ಯವಾಗಿ ಕರೆದುಕೊಂಡು ಹೋಗಿ! ೫೦ ನೂರು ರೂಪಾಯಿ ನೋಟಿನ ಕಟ್ಟುಗಳು ಕೈಗೆ ಬಂದಾಕ್ಷಣ ನಿಮ್ಮ ಮನೆ ಹೊಸಲು ದಾಟಬಾರದೇನು?........ಅವನು?

ರಾ—ಹಾಗಲ್ಲ, ಗುಂಡಪ್ಪನವರೇ! ಆಕೆ ಇದ್ದಾಳಲ್ಲಾ, ನನ್ನ ಸಹಧರ್ಮಿಣಿ ಅವಳು ಒಪ್ಪುವುದಿಲ್ಲ........ಕಿಟ್ಟು ಜೊತೆ ಕೂತು ಪುಳಿಯೋಗರ ತಿಂದರೆ, ಸಗಣಿ ನೀರಲ್ಲಿ ನನ್ನನ್ನದ್ದಿದರೂ ಆಕೆಗೆ ಸಮಾಧಾನ ಸಾಲದು.

ಗುಂ—(ಏನೋ ಹೊಳೆದಂತೆ) ನಂಜಪ್ಪ! ಅಂದ ಹಾಗೆ, ಕಿಟ್ಟು ಬಂದ ಮೇಲೆ........

ನಂ—ಓ! ಅದನ್ನ ಹೇಳುವುದಕ್ಕೆ ಮರೆತೆನಲ್ಲಾ........ಈ ಕಾಗದ ಹಾಕಿದ ದಿನವೇ ಅವರು ಹೊರಟುಬಿಟ್ಟಿದಾರಂತೆ ನಾಳೆ ನಾಳಿದ್ದು ಬಂದುಬಿಡಬಹುದು....

ಗುಂ—ನೋಡಿದಿಯಾ! ಹಾಗೆ ಅವನು ಬಂದ ಮೇಲೆ, ನಮ್ಮ ಮನೆಯಲ್ಲೂ ಏನಾದರೂ ಅವಾಂತರಗಳು ಆಗುತ್ತೋ ಏನೋ? ಅದಕ್ಕೆ ತಕ್ಕ ಏರ್ಪಾಟುಗಳು ಮಾಡಬೇಡವೆ?

ನಂ—ಮಾಡದೆ ಉಂಟೇ ಸ್ವಾಮಿ! ಅವರು ಚಕ್ಕಳವನ್ನ ಕಾಲಿಗೆ ಸಿಕ್ಕಿಸಿಕೊಂಡೇ ಓಡಾಡಬೇಕು; ಯಾವಾಗ ಅಂದರೆ ಆವಾಗ ಕ್ಷೌರಗಳಾಗಬೇಕು; ಪಿಂಗಾಣಿಯಲ್ಲೇ ಪಾನೀಯ. ಕೈಯಿಂದ ಊಟಮಾಡುವುದೇ ಇಲ್ಲ, ಇನ್ನು ಮೇಲೆ.....

ಗುಂ—ಮತ್ತೆ! ಬಾಯಿಗೆ ನಾವು ತುತ್ತು ಹಾಕಬೇಕೇನು? ಮೇಷ್ಟ್ರೇ! ನೀವು ಸುಮಾರು ಗ್ರಂಥಗಳು ತಿರುವಿ ಹಾಕಿದೀರಲ್ಲಾ.........ವ್ಯಾಸವಾಲ್ಮೀಕಿ ವಿರಚಿತ ಅಂತ; ಮುನಿಪರಾಶರ ಬಾದರಾಯಣ ಅಂತ! ಸೀಮಂತ, ಸೀಮಾತೀತ, ಸೀಮೋಲ್ಲಂಘನ ಅಂತ ಹೇಳುತ್ತಾರಲ್ಲಾ, ಈ ಸೀಮೆಯಿಂದ ಬಂದವರ ವಿಷಯ, ಅವರ ನಡೆನುಡಿ........

ರಾ—(ಎಚ್ಚೆತ್ತು) ಗುಂಡಪ್ಪನವರೇ! ರಾಮಾಯಣ ಮಹಾಭಾರತಗಳಲ್ಲಿ ಏನು ಹೇಳಿದೆ ಮಹಾ! ರಾಮ ಎಂ. ಎ. ಎಲ್. ಎಲ್. ಡಿ. ಮಾಡಿದನೇ? ಕಾಡಿಗೆ ಹೋಗಿ ಹೆಂಡತಿ ಕಳಕೊಂಡ! ಭೀಮ ಎಂ. ಎ. ಎಲ್. ಎಲ್. ಡಿ. ಮಾಡಿದನೇ? ಅಡಿಗೆ ಮಾಡಿ ಸೀರೆ ಉಟ್ಟುಕೊಂಡ! ಬಿಡಿ ಅಂದ್ರೆ. ಪರಾಶರರು ಪರದೇಶಕ್ಕೆ ಹೋಗಿದ್ದರೇ! ಯಾವ ಧರ್ಮ ಶಾಸ್ತ್ರದಲ್ಲೂ ಪಿಂಗಾಣಿಯ ಪ್ರಸ್ತಾಪವೇ ಇಲ್ಲ! ....ಆದರೆ, ಸ್ವಾಮಿ! ನಮ್ಮೂರು ಟಿ. ಬಿ. ಯಲ್ಲಿ ಯಾರೋ ಒಬ್ಬರು ಬಂದಿಳಿದಿದಾರೆ. ಬಹುಶಃ ಅವರು ಸೀಮೆಗೆ ಹೋಗಿ ಬಂದವರೇ ಇರಬೇಕು. ನಿನ್ನೆ ರೈಲಿಳಿದಾಗ ಅವರ ಟ್ರಂಕಿನ ಮೇಲೆ ಲಂಡನ್ ಚೀಟಿಗಳು ಹತ್ತಾರು ಅಂಟಿಸಿದ್ದುವು, ಅಂತ ನಮ್ಮ ಹುಡುಗ ಶಿಂಗ್ರಿ ಹೇಳಿದ.........

ನಂ—ಹಾಗಾದರೆ, ಅವರನ್ನೇ ಕೇಳಿ ತಿಳಿಯೋಣ, ಏನೇನಾಗಬೇಕು ಬದಲಾವಣೆಗಳು, ಅಂತ........

ಗುಂ—ಹೂಂ, ಅದೇ ಸರಿ! ಬನ್ನಿ! ಈಗಲೇ ಹೊರಡೋಣ....(ತೆರಳುವರು)

ದೃಶ್ಯ ೨

[ಟಿ. ಬಿ. ರೇಡಿಯೋ ಇಂಜಿನಿಯರ್ ರಮೇಶ್ ಈಸಿ ಛೇರಿನ ಮೇಲೆ ಬಿದ್ದಿರುವರು. ಗುಂಡಪ್ಪನವರೂ, ನಂಜಪ್ಪನವರೂ, ಮೇಷ್ಟ್ರೂ ಪ್ರವೇಶಿಸುವರು.]

ಗುಂ—(ಅವರ ಬಲಗಡೆಗೆ ಬಂದು ಆವೇಶದಿಂದ) ನಮ್ಮ ಕಿಟ್ಟು........ಕಿಟ್ಟು ಗೊತ್ತಿಲ್ಲವೇ ನಿಮಗೆ........ನಮ್ಮ ಕಿಟ್ಟು.........ಸೀಮೆಗೆ ಹೋಗಿದ್ದ........ತಮ್ಮ ಹಾಗೇನೆ........ಆದರೆ, ಅವನು ಅಲ್ಲಿ ಕಲಿತ ವಿದ್ಯೆ ಬೇರೆ........ನೀವು ಕಲಿತದ್ದಲ್ಲ ....ಅಂತ ಕಾಣುತ್ತೆ........ತಾವು ರೇಡಿಯೋ ಕಲಿತಿರಿ.........ಅವನು,

ರಮೇಶ್—ನೀವು ಕನ್ನಡದಲ್ಲಿ ಒದರುವುದಾದರೆ, ಎಡಮಗ್ಗುಲಿಗೆ ಬನ್ನಿ..... ನನ್ನ ಬಲ ಕಿವಿ ಇಂಗ್ಲೀಷಿಗೆ ಮೀಸಲು! ಅದರೊಳಕ್ಕೆ ಕನ್ನಡದ ಕೂಗು ಪ್ರವೇಶಿಸಲೇ ಕೂಡದು........

ಗುಂ—(ನಂಜಪ್ಪನವರ ಹತ್ತಿರ) ಹಾಗಾದರೆ, ನಮ್ಮ ಕಿಟ್ಟುವಿಗೂ ಒಂದು ಕಿವಿ ಐಬೇನು?

ನಂ—(ಮೆಲು ದನಿಯಲ್ಲಿ) ಅವರಿಗೆ ಎರಡು ಕಿವಿಗಳನ್ನೂ ಪರಂಗಿಯವರಿಗೆ ಮಾರಿರಬಹುದು ಅಂತ ತೋರುತ್ತೆ.

ಗುಂ—(ಎಡಮಗ್ಗುಲಿಗೆ ಬಂದು) ನಮ್ಮ ಕಿಟ್ಟು....ಎಂ. ಎ. ಎಲ್. ಎಲ್. ಡಿ. ಪಾಸು ಮಾಡಿದ ಸೀಮೆಯಲ್ಲಿ.

ರಮೇಶ್—(ನಗುತ್ತಾ) ಹಾಗೋ! ಒಳ್ಳೇ ಡಿಗ್ರಿ ದೊರೆತಹಾಗಾಯಿತು...

ನಂ—ಯಾಕೆ?

ಗುಂ—ಅದರ ಅರ್ಥವೇನು?

ರಮೇಶ್—Married a land lady's daughter ಅಂತ ಅದರ ಅರ್ಥ!

ಗುಂ—ಅಂದರೆ,

ನಂ—ಅಂದರೆ, (ಯೋಚಿಸುತ್ತಾ) ತಮ್ಮ ಮಕ್ಕಳು........ಅಲ್ಲಿಂದ ಬರುವಾಗ ಡಿಗ್ರಿ ಒಂದನ್ನೇ ಅಲ್ಲ, ಇನ್ನೂ ಏನೇನೋ ತರುತ್ತಾರೆ, ಅಂತಾರೆ ....

ಗುಂ—(ಸ್ವಗತ) ಆಹಾ! ಪರಮಾತ್ಮಾ! ಎಲ್ಲವೂ ನಿನ್ನ ಲೀಲೆ, ನಿನ್ನ ಅನುಗ್ರಹ!....... (ಪ್ರಕಾಶ) ಅದಿರಲಿ, ರಾಯರೇ! ನಮ್ಮ ಕಿಟ್ಟು ಬಂದಾಗ........ ಮನೆಯಲ್ಲಿ ಅಡಿಗೆ ಬಡಿಗೆಗಳು ಹೇಗೆ ಹೇಗೆ ....

ನಂ—(ಅಡ್ಡ ಬಂದು) ಪಿಂಗಾಣಿ ಕಪ್ಪುಗಳು ಎಷ್ಟು ಸಿದ್ಧವಾಗಿರಬೇಕು, ಅಂತ ನೀವು ಹೇಳಿಕೊಡಬೇಕು........

ರಾ—ಆ ಮೇಲೆ, ಗುಂಡಪ್ಪನವರೇ! ನಾನು ಹೇಳಿದ್ದನ್ನೂ ವಿಚಾರಿಸಿ........

ಗುಂ—ಹೂಂ........ಅವನು ಇಲ್ಲಿ ಬಂದ ಮೇಲೆ ಶುದ್ಧಿಗಿದ್ಧಿಗೆ ಒಪ್ಪಿಕೊಂಡಾನೆಯೇ!

ನಂ—ಅಲ್ಲದೆ, ಆವರಿಗೆ ನಮ್ಮೂರು ನಾಪಿತನೇ ಸಾಕೆ? ಇಂಗ್ಲೆಂಡಿಂದಲೇ ಕರೆತರುತ್ತಾರೋ, ಅಂತ ನನಗೊಂದು ಅನುಮಾನ.............ಅದನ್ನೂ ನೀವೇ ಪರಿಹರಿಸಬೇಕು.

ರಮೇಶ್—ನೋಡಿ, ಇಲ್ಲಿ! ಹೀಗೆ ನೀವು ಕೌನ್ಸಿಲ್ಲಿನಲ್ಲಿ ಕೇಳುವ ಹಾಗೆ ಕೇಳಿದರೆ, ನಾನೂನೂ ಅಲ್ಲಿ ಹೇಳುವ ಹಾಗೆ "ನೋಟೀಸ್" ಅಂತ ಹೇಳಿಬಿಡುತ್ತೇನೆ, ಅಷ್ಟೆ. ಆ ಪ್ರಾಣಿ ಬರುತ್ತಲೂ ಇಲ್ಲಿಗೆ ಕರೆದುಕೊಂಡು ಬನ್ನಿ! ಆ ಮೇಲೆ ಹೇಳುತ್ತೇನೆ.........ಹೋಗಿ ಬನ್ನಿ.........(ಬಂದವರೆಲ್ಲರೂ ಅನುಮಾನಿಸುವರು) ಬಾಯ್! (ಅವರೆಲ್ಲರೂ ಚಕಿತರಾಗಿ ಹೊರಡುವರು).

ದೃಶ್ಯ ೩

[ಗುಂಡಪ್ಪನವರ ಮನೆ.......ನಂಜಪ್ಪನವರು ನಿಂತಿದಾರೆ]

ಗುಂ—ನಂಜಪ್ಪ! ರೈಲುಸ್ಟೇಷನ್ನಿಗೆ ಗಾಡಿ ಕಳುಹಿಸಿದೆಯಾ?

ನಂ—ಓ! ಆಗಲೇ ಹೋಯಿತು, ಮೂರು ಟ್ಯಾಕ್ಸಿ.

ಗುಂ—ಮೂರು? ಯಾವ ಮೂಲೆಗೆ? ಅವನು ತರುವ ಡಿಗ್ರಿಯೇ ಎರಡು ಗಾಡಿ ಭರ್ತಿಯಾಗಬಹುದು! ಆ ಮೇಲೆ, ಇನ್ನೂ ಏನೇನೋ ತರುತ್ತಾನೆ ಅಂತ ಆ ರೇಡಿಯೋದವರು ಹೇಳಿದರಲ್ಲಾ........ಇನ್ನೂ ಒಂದು ನಾಲ್ಕಾದರೂ ಬೇಕು ....ಗ್ಯಾಸ್‌ಲೈಟು?

ನಂ—ಗಾಡಿಯೊಂದಕ್ಕೆರಡೆರಡರಂತೆ ಸಾಲದೆ?

ಗುಂ—ಊ ಹುಂ.........ಮುಂದೆ ಮೂರು, ಹಿಂದೆ ಮೂರು........ಹೆಚ್ಚಿನವು ಇರಲಿ! ನಂಜಪ್ಪ.......ಆಗಲೇ ೩೪ ಸಾವಿರ ಖರ್ಚಾಯಿತು. ಮಗನನ್ನ ಸೀಮೆಗೆ ಕಳುಹಿಸಿದ್ದಕ್ಕೆ.........ಈಗ ಮನೆಗೆ ತರಿಸಿಕೊಳ್ಳುವುದಕ್ಕೆ ಒಂದು ನೂರು ರೂಪಾಯಿ ಖರ್ಚಾದರೆ ಆಗಲಿ........ಏನು ಮಹಾ!

ನಂ—ಸೇತುವೆ ಆಚೆ ಓಲಗದವರನ್ನ ಆಗಲೇ ನಿಲ್ಲಿಸಿದೇನೆ........

ಗುಂ—ಸುಮ್ಮನೆ ನಿಂತೇನು ಮಾಡಬೇಕು, ಅವರು? ಬಾರಿಸಲಿ ಬಡಬಡನೆ ....ರೈಲು ಭದ್ರಾವತಿಯನ್ನು ಬಿಟ್ಟಿತು ಅಂದರೆ ಇಲ್ಲಿ ಪ್ರಾರಂಭವಾಗಬೇಕು, ಅವರ ಬೊಮ್ಮಡ........ಗೊತ್ತಾಯಿತೆ?

ನಂ—ಹೇಳಿಕಳುಹಿಸುತ್ತೇನೆ.

ಗುಂ—ಆ ಮೇಲೆ, ತೋರಣ?........(ಮೇಷ್ಟ್ರು ಪ್ರವೇಶ) ಓಹೋ! ಬನ್ನಿ! ರಾಮಯ್ಯಂಗಾರರೇ! ಈಗ ಬರ್ತಾನೆ ನಮ್ಮ ಕಿಟ್ಟು........ನಿಮ್ಮ ಶಿಷ್ಯ.

ನಂ—ಕಿಟ್ಟು ಅಂತ ಹೇಳಿದರೆ ಅವರಿಗಿನ್ನು ಸಿಟ್ಟಾದೀತು. ಆಗಲೇ ಎಚ್ಚರಿಕೆ ಕೊಟ್ಟಿದೇನೆ.

ಗುಂ—ಹೌದು! ಹೌದು. ಡಾಕ್ಟರ್ ಕ್ವಿಟ್ ಅಂತ ಅವನ ಹೆಸರನ್ನ ಅಲ್ಲಿ ಬದಲಾಯಿಸಿದರಂತೆ ಮೇಷ್ಟ್ರು! ನಮ್ಮ ಚಕ್ರವರ್ತಿ ಸಾರ್ವಭೌಮರ........ ಯಾರದು?........ಈಗ ಆ ಚರ್ಚೆಗೆಲ್ಲಾ ಸಮಯವಿಲ್ಲ!........'ಡಾಕ್ಟರ್ ಕ್ವಿಟ್' ಬರುವಾಗ ನೀವಿಲ್ಲಿರಬೇಕು ಮೇಷ್ಟ್ರೇ!

ರಾ—ಇರದೆ? ಅದಕ್ಕೋಸ್ಕರವೇ ಬಂದಿರುವುದು ನಾನು ಇಲ್ಲಿಗೆ........ರಸ್ತೆ ಯೆಲ್ಲಾ ಜನ ಕಿಕ್ಕಿರಿದು ತುಂಬಿದಾರೆ........ಅಲ್ಲಿ ನಿಂತುಕೊಳ್ಳುವುದಕ್ಕೆ ಜಾಗವಿಲ್ಲ! ಗರುಡವಾಹನ ತೋರಣಗಳ ಸಾಲು ಬಹು ಚೆನ್ನಾಗಿದೆ, ಗುಂಡಪ್ಪನವರೇ! ನಿಮ್ಮ ಮಗ, ಕಿಟ್ಟು........

ಗುಂ—ಡಾಕ್ಟರ್ ಕ್ವಿಟ್, ಅನ್ನಿ........

ರಾ—ಡಾಕ್ಟರ್ ಕ್ವಿಟ್! ಹೂಂ, ಮರೆತೆ........ಡಾಕ್ಟರ್ ಕ್ವಿಟ್ ಬಂದ ಕೂಡಲೇ, ಶಿಂಗ್ರಿ ಜ್ವರಾನ ಅವರಿಗೆ ತೋರಿಸಿ ಔಷಧಿ ಕೊಡಿಸೋಣ........ಅವರ ಬೋಣಿ ನಮ್ಮ ಹುಡುಗನ ಬಾಯಿಗೇ ಬೀಳಲಿ.

ನಂ—ಜ್ವರಕ್ಕೆ ಬಣ್ಣದ ನೀರು ಕುಡಿಸೋ ಡಾಕ್ಟರ್ ಅಲ್ಲ ಅವರು........ ಅಜ್ಞಾನಕ್ಕೆ ಅಂಜನ ಹಾಕುವ ಡಾಕ್ಟರು........ಅಂದರೆ, ವಿದ್ವಾಂಸರು........ಅಂತ ....ಅಷ್ಟೆ........ಆ ಬಿರುದಿನ ಅರ್ಥ.

[ಕಿಟ್ಟು ಕೇವಲ ಹಳ್ಳಿಗಮಾರನ ಹಾಗೆ, ಒಂದು ಗಂಟು ಸಮೇತ ಕಾಣಿಸಿಕೊಳ್ಳುವನು]

ಗುಂ—ಏಯ್! ಯಾರೋ ಅದು?.....ಹೋಗು ಹೋಗು! ನಮ್ಮ ಮಕ್ಕಳು ಬರುತ್ತಾರೆ ಈಗ ಲಂಡನ್ನಿಂದ........ಡಾಕ್ಟರ್ ಕ್ವಿಟ್ ಅನ್ನಿಸಿಕೊಂಡು! ಭಿಕ್ಷೆಗಿಕ್ಷೆಗೆ ಅವಕಾಶವಿಲ್ಲ........

ನಂ—(ಕಿಟ್ಟುವನ್ನು ಹಿಡಿದು ನಿಲ್ಲಿಸಿ) ಗುಂಡಪ್ಪನವರೇ! ಇದು ಕಿಟ್ಟು! ನಿಮ್ಮ ಮಕ್ಕಳು!

ಗುಂ—(ಸಿಡಿಲು ಬಡಿದಂತಾಗಿ) ಅಯ್ಯೋ! ಹೌದೇ!........ಕಿಟ್ಟು!!........ ಅಲ್ಲ...... ಡಾಕ್ಟರ್ ಕಿಟ್! ಡಾಕ್ಟರ್ ಕಿಟ್!........ಹೀಗೇಕಿದಾನೆ? ಕಿಟ್ಟೂನೇ ಇವನು? ೨೪ ಸಾವಿರ ಖರ್ಚುಮಾಡಿದ್ದಕ್ಕೆ ಜುಟ್ಟು ಜನಿವಾರಾನಾದರೂ ಕತ್ತರಿಸ ಬಾರದಾಗಿತ್ತೇನೋ........

ನಂ—ಒಳಗೆ ಬನ್ನಿ, ಒಳಗೆ ಬನ್ನಿ........ಆ ಗಂಟನ್ನಿಲ್ಲಿ ಕೊಡಿ.

ಗುಂ—(ತಲೆಯ ಮೇಲೆ ಕೈಯಿಟ್ಟು ಕೆಳಗೆ ಕುಕ್ಕರಿಸಿ) ಛೆ! ಛೆ!

ಕಿಟ್ಟು—ನೊಂದುಕೊಳ್ಳಬೇಡ; ಅಪ್ಪ! ನಾನು ನಾಲ್ಕುವರೆ ವರ್ಷ ಬೊಂಬಾಯಲ್ಲೇ ಇದ್ದೆ. ಹಡಗು ಹತ್ತಲೇ ಇಲ್ಲ. ನೀವು ಕುಳುಹಿಸಿದ ೨೪ ಸಾವಿರದಲ್ಲಿ ೨೦ ಸಾವಿರ ಹಾಗೆಯೇ ಬ್ಯಾಂಕಿನಲ್ಲಿ ಕೂಡಿಟ್ಟಿದೇನೆ. ಆದರ ಬಡ್ಡಿಯಿಂದ ನಾನು ಸುಖವಾಗಿ ಜೀವನ ಮಾಡಬಹುದು........ಸುಮ್ಮನೆ ಪರದೇಶಕ್ಕೆ ಹೋಗಿ ದುರಹಂಕಾರ ಕಲಿತು, ಕಾಸು ಕಳೆದುಕೊಂಡು ನಮ್ಮ ಜನರನ್ನ ಹೀಯಾಳಿಸುವುದಕ್ಕಿಂತ ....

ರಾ—ಗುಂಡಪ್ಪನವರೇ! (ಎಬ್ಬಿಸಿ) ಏಳಿ, ಅಂದರೆ! ನಿಮ್ಮ ಹುಡುಗ ನಿಜವಾಗಿಯೂ ಬುದ್ಧಿವಂತ ....ನನಗೆ ಗೊತ್ತು, ಆಗಲೇ! ಅವನು ಅಂಥಾ ದುರಾಚಾರಕ್ಕೆ ಯಾವುದಕ್ಕೂ ಹೋಗೋದಿಲ್ಲ ....ಈ ಪುಣ್ಯಭೂಮಿ ಬಿಟ್ಟು ಕದಲುವುದಿಲ್ಲ ಅಂತ.

ನಂ—ರಾಮಾಯಣದಲ್ಲಿ ಶ್ರೀರಾಮ ಮಾಡದೆ ಇದ್ದದ್ದು, ಭಾರತದಲ್ಲಿ ಶ್ರೀಭೀಮ ಮಾಡದೆ ಇದ್ದದ್ದು ನಮ್ಮ ಕಿಟ್ಟೂರಾಯರು ಎಂದಿಗೂ ಮಾಡುವುದಿಲ್ಲ ಅಂತ ನನಗೂ ಗೊತ್ತಿತ್ತು.

ಗುಂ—ಅಂತೂ, ನೀನು ನಿನ್ನ ಹೆಸರುಳಿಸಿಕೊಂಡು, ನನ್ನ ಹಣ ಉಳಿಸಿಕೊಂಡು ಬಂದಿಯಲ್ಲಾ, ಅಷ್ಟಕ್ಕೇ ಸಂತೋಷ.

ರಾ—ಅಲ್ಲದೆ, ನನ್ನ ಜೊತೆ ಪುಳಿಯೋಗರವನ್ನೂ ತಿನ್ನಬಹುದಲ್ಲಾ, ನೀನಿನ್ನು ಅದಕ್ಕೆ ನನಗೂ ಸಂತೋಷವೇ!! (ತೆರೆ)

—ನಾ. ಕಸ್ತೂರಿ.

—o—

ಹೆಚ್ಚು ಕಡಿಮೆ ಎಲ್ಲಾ ಚಲನ ಚಿತ್ರ ತಾರೆಯರೂ ಈ........ಟಾಯಿಲೆಟ್ ಸೋಪನ್ನು ಉಪಯೋಗಿಸುತ್ತಾರೆ. (ಜಾಹಿರಾತ್)

ಹೌದು. ಕೆಲವರು ಹೆಚ್ಚು, ಕೆಲವರು ಕಡಿಮೆ, ಅಷ್ಟೇ ವ್ಯತ್ಯಾಸ.

* * *

"ಸತಿ ಸುಲೋಚನ........ವಾಕ್ಚಿತ್ರ........ಹೊಸಕಾಪಿ" (ಜಾಹಿರಾತ್)

ಹಾಗಾದರೆ, ನಾವು ಸುಲೋಚನ ಹಾಕಿಕೊಂಡು ಹೋಗಬೇಕಾದ್ದಿಲ್ಲ.

* * *



ಕೇಸರಿ ಕುಟೀರಂ ಲಿ., ಮದರಾಸು

ಲೋಧ್ರ—ಗರ್ಭಾಶಯ ಟಾನಿಕ್

ಅಕ್ರಮ ಮುಟ್ಟು, ಬಂಜೆತನ, ಗರ್ಭಜವಾಯು, ನಿದ್ರಾಭಂಗ, ಅಜೀರ್ಣ, ಮಲಬದ್ಧತೆ, ಕೆಮ್ಮು, ತಲೆನೋವು, ಬೆನ್ನುನೋವು ಮುಂತಾದುವನ್ನು ವಾಸಿಮಾಡುವುದು.

ಅರ್ಕ—ಶ್ರೇಷ್ಠ ಜ್ವರ ನಿವಾರಿಣಿ

ಇನ್‌ಫ್ಲೂಯಂಜಾ, ಟೈಫಾಯಿಡ್, ಮಲೇರಿಯ ಮುಂತಾದ ಎಲ್ಲಾ ವಿಧವಾದ ಜ್ವರಗಳನ್ನೂ ಪ್ಲೀಹ ಮತ್ತು ಪಿತ್ತಕೋಶ ರೋಗಗಳನ್ನೂ ಗುಣಪಡಿಸುವುದು.

ಅಮೃತ—ರಕ್ತಶುದ್ಧಿ ಟಾನಿಕ್


ಎನೀಮಿಯ, ಮಲಬದ್ಧತೆ, ಅಜೀರ್ಣ, ನಿಶ್ಶಕ್ತಿ, ಬುದ್ಧಿಮಾಂದ್ಯ, ಎದೆಯ ನಿಶ್ಶಕ್ತಿ, ಜ್ಞಾಪಕಶಕ್ತಿ ಇಲ್ಲದಿರುವದು, ದೃಷ್ಟಿಮಾಂದ್ಯ, ತಲೆ ತಿರುಗುವುದು, ಚರ್ಮ ರೋಗಗಳು ಮುಂತಾದುವನ್ನು ವಾಸಿಮಾಡುವುದು.

ಏಜಂಟರು :

ಸಿಟಿ ಮೆಡಿಕಲ್ ಅಂಡ್ ಜನರಲ್ ಏಜನ್ಸಿ,

ಚಿಕ್ಕಪೇಟೆ, : : : ಬೆಂಗಳೂರು ಸಿಟಿ.

ಮುರಲಿ ಮೂವಿಟೋನ್ ರವರ
ಇನ್ನೊಂದು ಕಲಾಕೃತಿ



ಕುರ್ಬಾನಿ

ರಾಮು ಧರ್ಯಾಣಿ
- ದಿಗ್ದರ್ಶಿತ -

●

ಈ ಕೆಳಗಿನ ನುರಿತಾದ
ನಟನಟಿಯರು

●

ಈಶ್ವರಲಾಲ
ದುರ್ಗಾ ಖೋಟೆ
ವಾಸಂತಿ - ಕೌಸಲ್ಯ

●

ತಾರೀಖು 2-9-1943
ಬೆಂಗಳೂರು ಸಿಟಿ
ಪ್ಯಾರಾಮೌಂಟ್ ಥಿಯೇಟರಿನಲ್ಲಿ
ಪ್ರದರ್ಶನಾರಂಭ

ವಿವರಗಳಿಗೆ:

ಗುಡ್‌ವಿನ್ ಪಿಕ್ಚರ್ಸ್ ಕಾರ್ಪೊರೇಷನ್
ಬೆಂಗಳೂರು – ಬೆಜವಾಡ – ತಿರುಚನಾಪಳ್ಳಿ – ಎರ್ನಾಕುಲಂ.

— ಬರೆಯಿರಿ.

ಪಂತುಲಮ್ಮ

ಸಾರಥಿಯವರ ಉತ್ತಮ ತಯಾರಿಕೆ

●

— ದಿಗ್ದರ್ಶಕರು —

ಶ್ರೀ ರಾಮಬ್ರಹ್ಮಂ

●

ನಿಮ್ಮ ಪ್ರಿಯ ಸಿನಿಮಾ ಮಂದಿರದಲ್ಲಿ
ಪ್ರದರ್ಶಿಸುವ ತಾರೀಖನ್ನು ಎದುರು ನೋಡಿ

ವಿವರಗಳಿಗೆ—

ಚಂದ್ರ ಫಿಲ್ಮ್ಸ್ ಲಿಮಿಟೆಡ್

ಗಾಂಧಿನಗರ, ಬೆಂಗಳೂರು

— ಇವರಿಗೆ ಬರೆಯಿರಿ

Printed by B. S. Iyengar, Bangalore City.
Publisher—B. N. Gupta, Editor—M. SHIVARAM.